ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ


ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ನವೆಂಬರ್-೨೦೦೬ ಸಂಚಿಕೆ-೪



ಚರಕದ ವಿರುದ್ಧ ಆರ್ಥಿಕ ವಲಯ



ಜನಪದ ವಿಚಾರದಲ್ಲಿ

ನವೆಂಬರ್ -೨೦೦೬

೧. ಚರಕದ ವಿರುದ್ಧ ವಿಶೇಷ ಆರ್ಥಿಕ ವಲಯಗಳು ಪುಟ-೦೩
-ಸುರೇಂದ್ರ ಕೌಲಗಿ

ವಿಶೇಷ ಆರ್ಥಿಕ ವಲಯಗಳ ಸುನಾಮಿ ನಮ್ಮ ದೇಶವನ್ನು ಅಪ್ಪಳಿಸುತ್ತಿವೆ. ಈ ಅಲೆಗಳು ಪ್ರಾಕೃತಿಕವಾಗಿರದೆ ಮಾನವ ನಿರ್ಮಿತವಾಗಿವೆ. ಕೃತ್ರಿಮ ಸುನಾಮಿ ಅಲೆಗಳ ಹುಟ್ಟುವಿಕೆಗೆ ಕಾರಣರಾದವರ ಜಾಣ್ಮೆಯನ್ನು ಭಾರತೀಯರು ಪ್ರಶ್ನಿಸಬೇಕಾಗಿದೆ. ಈ ಜ್ವಲಂತ ಸಮಸ್ಯೆಯತ್ತ ಗಮನ ಸೆಳೆಯುತ್ತದೆ ಈ ಲೇಖನ.

೨. ಕಾಲ ಪ್ರವಾಹದಲ್ಲಿ ವೇದ ಪುಟ-೦೮
– ವಿನೋಬಾ

ಋಗ್ವೇದವು ಅತ್ಯಂತ ಪ್ರಾಚೀನತಮ ಗ್ರಂಥವಾಗಿದೆ. ಈ ಲೇಖನದಲ್ಲಿ ವಿದ್ವಾಂಸರಾದ ವಿನೋಬಾರವರು ಕಾಲ ಪ್ರವಾಹದಲ್ಲಿ ವೇದದ ಬೆಳವಣಿಗೆಯನ್ನು ಕುರಿತು ತಮ್ಮ ವಿದ್ವತ್‌ಪೂರ್ಣ ವಿಚಾರಗಳನ್ನು ತಿಳಿಸಿದ್ದಾರೆ.

೩. ಹೊಸ ಭಾರತದ ಹೊಸ ನಾಯಕ ಜಯಪ್ರಕಾಶ್ ಪುಟ-೧೬
– ಸುರೇಂದ್ರ ಕೌಲಗಿ

ರಾಷ್ಟ್ರದ ರಾಜಕೀಯ ಮತ್ತು ಸಾಮಾಜಿಕ ವೇದಿಕೆಯಿಂದ ಜಯಪ್ರಕಾಶ್ ನಾರಾಯಣ್ ಕಣ್ಮರೆಯಾಗಿ ಕೇವಲ ೨೭ ವರ್ಷಗಳಾಗಿವೆ. ಆದರೆ ಅವರ ಸಂಪೂರ್ಣಕ್ರಾಂತಿಯ ವಿಚಾರಗಳು ಇಂದಿಗೂ ಬಹುವಾಗಿ ಅನ್ವಯಿಸುತ್ತವಾದ್ದರಿಂದ ಅವರು ಹೊಸ ನಾಯಕರೇ ಆಗಿದ್ದಾರೆ. ಅವರ ವಿಚಾರಗಳು ಈ ಲೇಖನದಲ್ಲಿ ಬಂದಿವೆ.

೪. ವಸುಧೈವ ಕುಟುಂಬಕಂ ಪುಟ-೨೩
– ಪಿ. ಪರಮೇಶ್ವರನ್

ಈಗ ಜಾಗತೀಕರಣದ ವಿಚಾರವು ಕೇವಲ ಅರ್ಥಶಾಸ್ತ್ರವನ್ನವಲಂಬಿಸಿದೆ. ಆದರೆ ಈ ಲೇಖನದ ಲೇಖಕರ ಅಭಿಪ್ರಾಯದಲ್ಲಿ ಅದು ಆಧ್ಯಾತ್ಮಿಕ ನೆಲೆಯಲ್ಲಿಯೂ ಆಗಬೇಕೆಂದು ಸೂಚಿಸಿದ್ದಾರೆ.

೫. ಜನಪದ ನಿಲಯದ ಅಂತರಂಗದಲ್ಲಿ.............೩೬ ಪುಟ-೨೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ನವೆಂಬರ್-೨೦೦೬
ಸಂಪುಟ-೭
ಸಂಚಿಕೆ-೪

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☏ ೦೮೨೩೬ ೨೯೮೭೫೪
e-mail - janapada@yahoo.com

ಹೊಲೆಯನ ಅರ್ಥ

ಶೀಲವನು ಕೈಕೊಂಡು ನಡೆಸದಾತನೆ ಹೊಲೆಯ
ಹೇಳಿದ ಹರಿಕತೆಯ ಕೇಳದವ ಹೊಲೆಯ
ಆಳಾಗಿ ಅರಸಂಗೆ ಕೇಡು ಬಗೆವವ ಹೊಲೆಯ
ಸೂಳೆಯನು ಕಾಮಿಸುವ ಶುದ್ಧ ಹೊಲೆಯ

ಕೊಂಡ ಸಾಲಗಳನ್ನು ತಿದ್ದದಾತನೆ ಹೊಲೆಯ
ಲಂಡತನದಲಿ ನಡೆವ ನರ ಭಂಡ ಹೊಲೆಯ
ಉಂಡ ಮನೆಗೆರಡನ್ನು ಬಗೆವಾತನೆ ಹೊಲೆಯ
ಹೆಂಡತಿಯ ಇಚ್ಛೆಯವ ಹೇಡಿ ಹೊಲೆಯ

ಇದ್ದಾಗ ದಾನಧರ್ಮವ ಮಾಡದವ ಹೊಲೆಯ
ಮದ್ದಿಕ್ಕಿ ಕೊಲ್ಲುವವ ಮಾರಿ ಹೊಲೆಯ
ಬದ್ಧವಹ ನಯನುಡಿಯು ಇಲ್ಲದಾತನೆ ಹೊಲೆಯ
ಶುದ್ಧ ತಾನೆಂಬಾತ ಶುಂಠ ಹೊಲೆಯ

ಆಸೆ ಮಾತನು ಕೊಟ್ಟು ಭಾಷೆ ತಪ್ಪುವ ಹೊಲೆಯ
ಲೇಸು ಉಪಕಾರಗಳ ಮಾಡದವ ಹೊಲೆಯ
ಮೋಸದಲಿ ಜೀವನವ ಮುನಿದು ಕೆಡಿಸುವ ಹೊಲೆಯ
ಹುಸಿಯ ಬೊಗಳುವನೊಬ್ಬ ಹುಚ್ಚ ಹೊಲೆಯ

ಅರಿತು ಆಚಾರವನು ನಡೆಸದಾತನೆ ಹೊಲೆಯ
ಪರಸತಿಗೆ ಅಳುಕದವ ಪಾಪಿ ಹೊಲೆಯ
ಗುರು-ಹಿರಿಯರನು ಕಂಡು ನಮಿಸದಾತನೆ ಹೊಲೆಯ
ಪುರಂದರ ವಿಠಲನ ನೆನೆಯದವ ಹೊಲೆಯ

– ಪುರಂದರದಾಸರು

ವಿಚಾರ ದೀಪ್ತಿ

ವೀರಶೈವ-ಲಿಂಗಾಯತ ಎಂಬ ಎರಡು ಗುಂಪುಗಳು ತಮ್ಮ ತಮ್ಮ ಸ್ವಾರ್ಥಕ್ಕಾಗಿ ಪೈಪೋಟಿಗಿಳಿದಿವೆ.

ಸೈದ್ಧಾಂತಿಕ ಹಿನ್ನೆಲೆಯಲ್ಲಿ ನಿಜವಾದ ಭಿನ್ನತೆಯಿದ್ದರೆ ನೀವು ಮನ್ನಡೆದು ಹೊಸ ಸಮಾಜವನ್ನು ಕಟ್ಟುವುದಾದರೆ ಸ್ವಾಗತ. ಆದರೆ ಈಗ ನಡೆಯುತ್ತಿರುವುದು ಅದಲ್ಲ. ಇಂದು ಎಲ್ಲ ಕಡೆ ಆಚಾರ್ಯರ ಉತ್ಸವ ಸಮಿತಿಗಳಿರುವಂತೆಯೆ ಬಸವಣ್ಣನ ಹೆಸರಿನಲ್ಲಿ ಭಜನಾಮಂಡಳಿಗಳು ಹುಟ್ಟಿಕೊಂಡಿವೆ. ಇಂತಹ ಭಜನಾಮಂಡಳಿಗಳಿಗೆ ಹಾಗೂ ಉತ್ಸವ ಸಮಿತಿಗಳಿಗೆ ಬಸವಣ್ಣನವರ ತತ್ವ ಮತ್ತು ಆದರ್ಶಗಳ ಅನುಷ್ಠಾನಕ್ಕಿಂತ ತಮ್ಮ ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳುವುದೆ ಮುಖ್ಯವಾಗಿದೆ. ಇದು ಈ ಧರ್ಮಕ್ಕೇ ಅವಮಾನಕಾರಿ. ಭಜನಾ ಮಂಡಳಿ ಮತ್ತು ಸಮಿತಿಗಳು ಹಿತಾಸಕ್ತರ ಆಣತಿಯಂತೆ ನಡೆಯುತ್ತವೆ. ತಮ್ಮ ಸ್ವಾರ್ಥ, ಪ್ರತಿಷ್ಠೆ ಮತ್ತು ಪಂಗಡಗಳನ್ನು ಬೆಳೆಸಿಕೊಳ್ಳಲು ಬಸವಣ್ಣನನ್ನು ಎಳೆದು ತರುತ್ತಿದ್ದಾರೆ. ಬಸವಣ್ಣನವರ ಹೆಸರಿನಲ್ಲಿ ಈ ಸಮಾಜದಲ್ಲಿ ಏನು ನಡೆಯುತ್ತಿದೆಯೆಂಬುದು ಎಲ್ಲರಿಗೂ ತಿಳಿದಿದೆ. ನಿಜವಾಗಿಯೂ ನಿಮಗೆ ಬಸವಣ್ಣನ ಆದರ್ಶಗಳಲ್ಲಿ ಶ್ರದ್ಧೆ ಇದ್ದಿದ್ದರೆ ಇಂದು ಕರ್ನಾಟಕದಲ್ಲಿ ಒಂದೇ ಒಂದು ಅಸ್ಪೃಶ್ಯರ ಕೇರಿ ಇರಬಾರದಿತ್ತು. ಬರಿ ಹುಸಿ ಹೋರಾಟ, ಆತ್ಮ ವಂಚನೆ. "ಇವನಾರವ, ಇವನಾರವ" ಎಂದು ಉಪನ್ಯಾಸ ಮಾಡಿ ಆಶೀರ್ವಚನ ನೀಡಿ ಉತ್ತರಾಧಿಕಾರಿಗಳನ್ನಾಗಿ ನಿಮ್ಮ ಅಣ್ಣನಮಗ, ತಮ್ಮನ ಮಕ್ಕಳನ್ನೇ ಕೂಡಿಸಿದ್ದೀರಿ. ಯಾವುದಾದರೂ ಧರ್ಮ ಇಂದಿನವರೆಗೆ ಒಬ್ಬ ಕಳ್ಳನನ್ನೋ, ಭ್ರಷ್ಟನನ್ನೋ, ಕ್ರೂರಿಯನ್ನೋ ಹೊರಹಾಕಿದೆಯೆ? ನೈತಿಕ ನೆಲೆ ಇಲ್ಲದಿರುವ ಧರ್ಮ, ಧರ್ಮವೇ ಅಲ್ಲ. ಮಾನವೀಯ ಮೌಲ್ಯವಿಲ್ಲದ ಧರ್ಮಕ್ಕೆ ಅರ್ಥವಿಲ್ಲ. ದೊಡ್ಡವರ, ಧರ್ಮದ ಹೆಸರು ಹೇಳಿ ಕೀಳು ಸ್ವಾರ್ಥ ಸಾಧನೆಯೆ ಇಂದು ಎಲ್ಲೆಲ್ಲಿಯೂ ಕಾಣುತ್ತಿದೆ. ನಿಜವಾಗಿಯೂ ಧರ್ಮವನ್ನು ಉಳಿಸಿಕೊಳ್ಳಬೇಕು ಎಂದರೆ, ಸಮಾಜದ ಜನ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಮೇಲಾಟದಿಂದ ಸೃಷ್ಟಿಯಾಗಿರುವ ಎಲ್ಲ ಭೇದಗಳನ್ನು, ವಿಭಾಗೀಕರಣವನ್ನು ಅಳಿಸಿಹಾಕಿ ಒಂದಾಗಬೇಕು. ಆ ಮೂಲಕ ಶರಣರ ಹೋರಾಟಕ್ಕೆ ಅರ್ಥ ತರಬೇಕು. ಈ ಕಾರ್ಯವನ್ನು ಜನ ಮಾಡದೆ, ಮಠಾಧೀಶರಿಗೆ ಬಿಟ್ಟರೆ ಅವರು ಸಮಾಜವನ್ನು ಮತ್ತಷ್ಟು ಹದಗೆಡಿಸುತ್ತಾರೆ ಅಷ್ಟೆ.

-ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮಿ

ಚರಕದ ವಿರುದ್ಧ ವಿಶೇಷ ಆರ್ಥಿಕ ವಲಯಗಳು

-ಸುರೇಂದ್ರ ಕೌಲಗಿ

'ಎಲ್ಲ ಅರ್ಥಶಾಸ್ತ್ರಜ್ಞರನ್ನು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಮಲಗಿಸಿದರೂ ಅವರು ಒಂದು ತೀರ್ಮಾನಕ್ಕೆ ಬರಲಾರರು.' - ಜಾರ್ಜ್ ಬರ್ನಾಡ್ ಷಾ

೨೦೦೫ ಮೇ ಮಾಹೆಯನ್ನು ಭಾರತದ ಅಭಿವೃದ್ಧಿಯ ಇತಿಹಾಸದಲ್ಲಿ ಒಂದು ದುರಂತದ ದಿನವೆಂದು ದಾಖಲಾದರೆ ಅದು ತಪ್ಪಾಗಲಾರದು. ೧೯೯೦ರಲ್ಲಿ ಪಿ.ವಿ. ನರಸಿಂಹರಾವ್‌ರವರು ಪ್ರಧಾನಿಯಾಗಿದ್ದಾಗ ಜಾಗತೀಕರಣದ ಹೆಸರಿನಲ್ಲಿ ವಿಶ್ವದ ಬಹುರಾಷ್ಟ್ರೀಯ ಕಂಪನಿಗಳಿಗೆ ಅವುಗಳ ವ್ಯಾಪಾರಕ್ಕಾಗಿ ಭಾರತದ ಬಾಗಿಲನ್ನು ತೆರೆದರು. ಈಗ ೨೦೦೫ ಮೇ ಮಾಹೆಯಲ್ಲಿ ಯು.ಪಿ.ಎ ಸರ್ಕಾರವು ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯ ಬಗ್ಗೆ ಅನುಕೂಲಕರವಾದಂಥ ಕಾನೂನನ್ನು ಮಾಡುವುದರ ಮೂಲಕ ವಿಶ್ವದ ಸಾವಿರಾರು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಭಾರತದ ನೂರಾರು ಬಹುರಾಷ್ಟ್ರೀಯ ಕಂಪನಿಗಳು ಭಾರತ ದೇಶದ ಹೃದಯಗಳಾಗಿರುವ ಹಳ್ಳಿಗಳ ಮೇಲೆ ನಾಲ್ಕು ದಿಕ್ಕುಗಳಿಂದಲೂ ಮುಕ್ತವಾಗಿ ದಾಳಿ ಮಾಡುವುದಕ್ಕೆ ಅನುವು ಮಾಡಿಕೊಟ್ಟಿದೆ. ಇನ್ನು ಮುಂದೆ ಭಾರತದ ಹಳ್ಳಿಗಳು ಹಳ್ಳಿಗಳಾಗಿ ಉಳಿಯದೆ ನಗರಗಳೆಂಬ ಬಕಾಸುರನ ಹೊಟ್ಟೆಗೆ ಕಾನೂನು ಬದ್ಧವಾಗಿ ತುತ್ತಾಗಲಿವೆ! ವ್ಯವಸಾಯ ಮಾಡುವ ರೈತರೆಲ್ಲರು ತಮ್ಮ ವ್ಯವಸಾಯ ಭೂಮಿಯನ್ನು ದೊಡ್ಡ ದೊಡ್ಡ ಕಂಪನಿಗಳಿಗೆ ಹಣದಾಸೆಗೆ ಮಾರಿ ತಮ್ಮ ಸ್ಥಳದಲ್ಲಿಯೆ ತಾವು ಪರಕೀಯರ ದಾಸರಾಗಿ ಕೆಲಸ ಮಾಡುವಂಥ ಪರಿಸ್ಥಿತಿ ಉಂಟಾಗಲಿದೆ. ನಗರಗಳಾವವು ಹಳ್ಳಿಗಳಾವವು ಎಂಬುದನ್ನು ಬೇರ್ಪಡಿಸಲು ಸಾಧ್ಯವಾಗದಷ್ಟು ಸೂಕ್ಷ್ಮವಾದ ಗೆರೆ ಪಟ್ಟಣ ಮತ್ತು ಹಳ್ಳಿಗಳನ್ನು ಬೇರ್ಪಡಿಸಲಿದೆ. ಇದೆಲ್ಲವು ಭಾರತವನ್ನು ಪಕ್ಕದ ಚೀನಾ ಮತ್ತು ಯುರೋಪಿನ ಮುಂದುವರೆದ ರಾಷ್ಟ್ರಗಳೊಂದಿಗೆ ಪ್ರತ್ಯಕ್ಷವಾಗಿ ಕೈಗಾರಿಕಾ ಕ್ಷೇತ್ರದಲ್ಲಿಯೂ ಹಾಗೂ ಪರೋಕ್ಷವಾಗಿ ರಕ್ಷಣಾ ವ್ಯವಸ್ಥೆಯಲ್ಲಿಯೂ ಬಲಿಷ್ಠವಾಗುವಂಥ ರಾಷ್ಟ್ರವನ್ನು ನಿರ್ಮಿಸವುದಕ್ಕಾಗಿ ಈ ಯೋಜನೆ ಜಾರಿಗೆ ಬರುತ್ತಲಿದೆ. ಯಾವ ರೀತಿ ಸುನಾಮಿ ಅಲೆಗಳು ದಿಢೀರನೆ ಕರಾವಳಿಯನ್ನು ಅಪ್ಪಳಿಸಿ ಎಂಥ ಅನಾಹುತವನ್ನು ಮಾಡಿದವೊ ಅದೇ ರೀತಿ ವಿಶೇಷ ಆರ್ಥಿಕ ವಲಯಗಳೆಂಬ ಸುನಾಮಿ ಅಲೆಗಳು ಭಾರತದ ಏಳು ಲಕ್ಷ ಹಳ್ಳಿಗಳನ್ನು ದಿಢೀರನೆ ನಾಶ ಮಾಡಲಿವೆ. ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯ

ಕಾನೂನು ಲೋಕಸಭೆಯಲ್ಲಿ ಚರ್ಚಿತವಾಗಿ ಜಾರಿಗೆ ಬಂದಿದ್ದರೂ ಸಹ ದೇಶದ ಏಳು ಲಕ್ಷ ಹಳ್ಳಿಗಳಲ್ಲಿರುವ ಬಹು ದೊಡ್ಡ ಸಂಖ್ಯೆಯ ರೈತರಿಗೆ ಈ ವಿಷಯವನ್ನು ಸರಿಯಾಗಿ ತಿಳಿಸುವ ಯಾವ ಪ್ರಯತ್ನವೂ ನಡೆಯಲಿಲ್ಲವೆಂಬುದು ಪ್ರಜಾಪ್ರಭುತ್ವ ವ್ಯವಸ್ಥೆಗೇ ಅವಮಾನವನ್ನುಂಟುಮಾಡುವಂಥದ್ದಾಗಿದೆ. ಅಸಂಘಟಿತರಾಗಿರುವ, ಅಶಿಕ್ಷಿತರಾಗಿರುವ ಮತ್ತು ಬಡತನದಲ್ಲಿರುವ ರೈತರನ್ನು ಹಣದಾಸೆಯ ಮೂಲಕ ಸುಲಭವಾಗಿ ಖರೀದಿಸಬಹುದೆಂಬ ಮನೋಭಾವನೆಯೇ ಕೇಂದ್ರ ಸರ್ಕಾರದ ರೈತರ ಬಗೆಗಿನ ಉದಾಸೀನ ಮನೋಭಾವಕ್ಕೆ ಕಾರಣವಾಗಿದೆ. ಒಂದು ಆರ್ಥಿಕ ವಲಯ ಸ್ಥಾಪಿತವಾಗಬೇಕಾದರೆ ಕಡಿಮೆ ಎಂದರೆ ನಾಲ್ಕು ಚದರ ಕಿ.ಮಿ. ನಷ್ಟು ಭೂಮಿ ಬೇಕಾಗುತ್ತದೆ. ಇನ್ನು ಕೆಲವು ವಲಯಗಳಿಗೆ ಸಾವಿರಾರು ಹೆಕ್ಟೇರ್ ಭೂಮಿ ಬೇಕಾಗುತ್ತದೆ. ಒಂದು ಸಲ ಒಂದು ಪ್ರದೇಶದಲ್ಲಿ ಒಂದು ವಿಶೇಷ ಆರ್ಥಿಕ ವಲಯ ಸ್ಥಾಪಿತವಾಗಬೇಕೆಂದು ತೀರ್ಮಾನವಾದರೆ ಆಗ ಆ ವಲಯಕ್ಕೆ ಬೇಕಾಗುವ ಭೂಮಿ ಅದು ಫಲವತ್ತಾಗಿರಲಿ, ಅರಣ್ಯ ಭೂಮಿಯಾಗಿರಲಿ, ಗಣಿಪ್ರದೇಶವಾಗಿರಲಿ, ಕಾಲಕ್ರಮೇಣ ನೀರಾವರಿಗೆ ಒಳಪಡುವ ಪ್ರದೇಶವಾಗಿರಲಿ ಇದ್ಯಾವುದನ್ನು ಗಮನಿಸದೆ ರೈತರಿಗೆ ಯಥೇಚ್ಚವಾಗಿ ಹಣಕೊಟ್ಟು ಸಾವಿರಾರು ಹೆಕ್ಟೇರ್ ಭೂಮಿಯನ್ನು ಖರೀದಿಸಿ ಅಲ್ಲಿ ಬಹುರಾಷ್ಟ್ರೀಯ ಕಂಪನಿಗೆ ಅವಕಾಶ ಮಾಡಿಕೊಡಲಾಗುವುದು. ಆ ಕಂಪನಿಯು ಉತ್ಪಾದಿಸುವ ಪದಾರ್ಥಕ್ಕೆ ಬೇಕಾಗುವ ಕಚ್ಚಾಮಾಲನ್ನು ಆ ಕಂಪನಿಯು ಎಲ್ಲಿಂದಾದರೂ ತರಿಸಿಕೊಳ್ಳಬಹುದು. ಹೀಗೆ ಸ್ಥಾಪಿತವಾಗುವ ಕೈಗಾರಿಕೆಯ ಮೇಲೆ ಸ್ಥಳೀಯರದ್ದಾಗಲಿ, ರಾಜ್ಯಸರ್ಕಾರದ್ದಾಗಲಿ ನೇರವಾದ ನಿಯಂತ್ರಣವಿರುವುದಿಲ್ಲ. ಕೇಂದ್ರ ಸರ್ಕರದ ಪರೋಕ್ಷವಾದ ನಿಯಂತ್ರಣವಿರುತ್ತದೆ. ವಿಶೇಷ ಆರ್ಥಿಕ ವಲಯಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳ ಮಾಲೀಕರು ತಮ್ಮ ಕೈಗಾರಿಕೆಗೆ ಬೇಕಾದ ಅಂತರ್‌ವ್ಯವಸ್ಥೆಯನ್ನು ನಿರ್ಮಿಸಿಕೊಂಡಾದ ನಂತರ ಉಳಿಯುವ ಭೂಮಿಯನ್ನು ತಮ್ಮ ಕೈಗಾರಿಕೆಯ ಉದ್ದೇಶ್ಯಕ್ಕಲ್ಲದೆ ಬೇರೆ ಉದ್ದೇಶಕ್ಕೂ ಉಪಯೋಗಿಸಲು ಈ ಕಾನೂನಿನಲ್ಲಿ ಅವಕಾಶವಿದೆ. ಅಂದರೆ ಪ್ರಾರಂಭದಲ್ಲಿ ಕೈಗಾರಿಕೆಯ ಹೆಸರಿನಲ್ಲಿ ಬಹಳಷ್ಟು ಭೂಮಿಯನ್ನು ಕಬಳಿಸಿ ನಂತರ ಉಳಿದ ಭೂಮಿಯನ್ನು ಕೈಗಾರಿಕೇತರ ಕೆಲಸಕ್ಕೆ ಉಪಯೋಗಿಸಿ ಹೇರಳವಾಗಿ ಲಾಭ ಪಡೆಯಬಹುದಾಗಿದೆ. ಇದಿಷ್ಟು ಸಾಲದೆಂಬಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನೇಕ ಪ್ರಕಾರದ ತೆರಿಗೆಗಳ ವಿನಾಯಿತಿಯು ಸಹ ವಿಶೇಷ ಆರ್ಥಿಕ ವಲಯದಲ್ಲಿಯ ಕೈಗಾರಿಕೋದ್ಯಮಿಗಳಿಗೆ ದೊರೆಯುತ್ತವೆ. ಕಡಿಮೆ ಬೆಲೆಯಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಿನ ಸರಬರಾಜು ಸಹ ದೊರೆಯುತ್ತವೆ. ಇದರಿಂದಾಗಿ ಹಳ್ಳಿಗಳಲ್ಲಿ ಇಲ್ಲದೆ ಇರುವಂಥ ಸೌಕರ್ಯಗಳು ಆರ್ಥಿಕ ವಲಯಕ್ಕೆ

ದೊರೆಯುವುದರಿಂದ ಹಳ್ಳಿಯ ಜನರು ಪಟ್ಟಣಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ವಲಸೆಹೋಗುವರು. ಭೂಮಿಯನ್ನು ಶಾಶ್ವತವಾಗಿ ಕಳೆದುಕೊಂಡ ರೈತರು ಕಾಲಕ್ರಮೇಣ ಹಣವನ್ನೂ ಕಳೆದುಕೊಂಡವರಾಗಿ ನಿರ್ಗತಿಕರಾಗುವರು. ಆ ವಿಶೇಷ ಆರ್ಥಿಕ ವಲಯಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳಲ್ಲಿ ಭೂಮಿಯನ್ನು ಕಳೆದುಕೊಂಡಂಥವರಿಗೆ ಉದ್ಯೋಗ ಕಡ್ಡಾಯವಾಗಿ ದೊರೆಯುತ್ತದೆಂಬ ಯಾವ ಭರವಸೆಯೂ ಇಲ್ಲ.

ಪ್ರತಿಯೊಂದು ರಾಜ್ಯವೂ ತನ್ನ ನೆರೆ ರಾಜ್ಯಕ್ಕಿಂತ ಹೆಚ್ಚು ಅಭಿವೃದ್ಧಿಹೊಂದಬೇಕೆಂಬ ಉದ್ದೇಶದಿಂದ ಬೃಹತ್ ಬಹುರಾಷ್ಟ್ರೀಯ ಕಂಪನಿಗಳನ್ನು ಆಕರ್ಷಿಸುವುದಕ್ಕಾಗಿ ಎಷ್ಟು ಸಾಧ್ಯವೋ ಅಷ್ಟು ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲು ಪೈಪೋಟಿಮಾಡುತ್ತಿದೆ. ಈಗಾಗಲೇ ಕರ್ನಾಟಕ ರಾಜ್ಯವೊಂದೆ ೪೯೦೦ ಹೆಕ್ಟೇರ್‌ನಷ್ಟು ಭೂಮಿಯನ್ನು ವಿಶೇಷ ಆರ್ಥಿಕ ವಲಯಗಳಿಗೆ ಮೀಸಲಾಗಿಟ್ಟು ೪೧ ಕೈಗಾರಿಕಾ ಸಂಸ್ಥೆಗಳನ್ನು ಆಹ್ವಾನಿಸಿದೆ. ಇದೇ ರೀತಿ ಪ್ರತಿಯೊಂದು ರಾಜ್ಯದಲ್ಲೂ ಆಗುತ್ತಿದೆ. ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯ ವಿಚಾರದಲ್ಲಿ ದೇಶದಲ್ಲಿ ಭಿನ್ನಾಭಿಪ್ರಾಯದ ಅಲೆಯೆ ಎದ್ದಿದೆ. ಈ ಯೋಜನೆಯು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಭೂಮಿ ವ್ಯವಹಾರದಲ್ಲಿ ಕಳ್ಳತನದ ಮಾರ್ಗವನ್ನು ಹಿಡಿದಂಥವರಿಗೆ ಬಹುವಾಗಿ ಪ್ರೋತ್ಸಾಹಿಸುತ್ತಿದೆ. ಉದಾಹರಣೆಗೆ ನಮ್ಮ ದೇಶದ ರಾಜಧಾನಿ ಪ್ರದೇಶವನ್ನೇ ಗಮನಿಸಬಹುದು. ಇಲ್ಲಿ ವಿಶೇಷ ಆರ್ಥಿಕ ವಲಯಗಳ ಪೈಕಿ ಶೇ.೨೫ರಷ್ಟು ಕೈಗಾರಿಕೆಗಳು ಕೈಗಾರಿಕಾ ಉತ್ಪಾದನಾ ಉದ್ದೇಶಹೊಂದಿದ್ದರೆ ಉಳಿದವು ಮನೋರಂಜನೆ, ವಸತಿಸೌಲಭ್ಯ ಮುಂತಾದ ಕೈಗಾರಿಕೇತರ ಉದ್ದೇಶಗಳನ್ನು ಹೊಂದಿವೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತರುವ ಹಿಂದೆ ಮುಖ್ಯವಾಗಿದ್ದಂಥ ಉದ್ದೇಶ್ಯ ಭಾರತವನ್ನು ಬಡತನರಹಿತ ಮತ್ತು ಸ್ವಾವಲಂಬಿತ ದೇಶವನ್ನಾಗಿ ಮಾಡಬೇಕೆಂಬದಾಗಿತ್ತು. ನಗರಗಳ ಅಭಿವೃದ್ಧಿಗಿಂತ ಹೆಚ್ಚಾಗಿ ಹಳ್ಳಿಗಳ ಅಭಿವೃದ್ಧಿ ಆಗಬೇಕೆಂಬುದು ಮಹತ್ವದ ವಿಚಾರವಾಗಿತ್ತು. ಹಳ್ಳಿ, ನಂತರ ಹಳ್ಳಿಗಳ ಸಮೂಹ, ನಂತರ ಇಡೀ ದೇಶ ಆರ್ಥಿಕವಾಗಿ ಸ್ವಯಂಚಾಲಿತ ಘಟಕಗಳಾಗಿ ರೂಪುಗೊಳ್ಳಬೇಕೆಂಬ ಕನಸನ್ನಿಟ್ಟುಕೊಳ್ಳಲಾಗಿತ್ತು. ಕೈಗಾರಿಕಾಕರಣವು ಯಾವ ದೃಷ್ಟಿಯಿಂದಲೂ ಹಳ್ಳಿಗಳ ಮೂಲಭೂತ ಜೀವನಪದ್ಧತಿಯನ್ನು ಹಾಳುಮಾಡದೆ ಅದನ್ನು ಸುಧಾರಿಸಿ, ಬಲಿಷ್ಠಗೊಳಿಸಿ ಹಳ್ಳಿಗಳಲ್ಲಿಯ ಜೀವನ ಸುಖ ಮತ್ತು ನೆಮ್ಮದಿಯಿಂದ ನಡೆಯಬೇಕೆಂಬ ಕನಸು ಸಹ ಇತ್ತು. ಆದ್ದರಿಂದ ಬೃಹತ್ ಉತ್ಪಾದನೆಗಿಂತ ಬೃಹತ್ ಜನಸಂಖ್ಯೆಗೆ ಉದ್ಯೋಗ ದೊರೆಯಬೇಕೆಂಬ ನೀತಿ

ಇರಬೇಕೆಂದು ಬಯಸಲಾಗಿತ್ತು. ಭೂಮಿಯ ಒಡೆತನ ಯಾವ ಕಾಲಕ್ಕೂ ಉಳುವವನಿಗೇ ಇರಬೇಕೆಂದು ಬಯಸಲಾಗಿತ್ತು. ಆದರೆ ಈಗ ದೇಶದಾದ್ಯಂತ ಸ್ಥಾಪಿತಗೊಳ್ಳಲಾಗುತ್ತಿರುವ ವಿಶೇಷ ಆರ್ಥಿಕ ವಲಯಗಳು ಮೇಲ್ಕಾಣಿಸಿದ ಎಲ್ಲ ಆಶಯಗಳನ್ನು ಬುಡಮೇಲು ಮಾಡುತ್ತಿವೆ. ಈ ಆರ್ಥಿಕ ವಲಯಗಳಿಂದ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆಂದು ಹೇಳಲಾಗುತ್ತದೆ. ಆದರೆ ಆ ಉದ್ಯೋಗಗಳ ಸೃಷ್ಟಿಗಾಗಿ ತೊಡಗಿಸಲಾಗುವ ಬಂಡವಾಳ ಮತ್ತು ಶಾಶ್ವತವಾಗಿ ಕಳೆದು ಹೋಗುವ ಭೂಮಿಯ ಬೆಲೆ ಇತ್ಯಾದಿ ಸಂಗತಿಗಳನ್ನು ಲೆಕ್ಕ ಹಾಕಿದಾಗ ಒಬ್ಬ ವ್ಯಕ್ತಿಯ ಉದ್ಯೋಗಕ್ಕಾಗಿ ಹೂಡಲಾಗುವ ಮೂಲ ಬಂಡವಾಳ ಮತ್ತು ಆ ವ್ಯಕ್ತಿಯಿಂದ ಉತ್ಪಾದಿತವಾಗುವ ಪದಾರ್ಥಗಳ ನಿಜವಾದ ಮೌಲ್ಯವನ್ನು ಲೆಕ್ಕಹಾಕಿದರೆ ಹಿಮಾಲಯ ಸದೃಶವಾದ ಆರ್ಥಿಕ ತಪ್ಪನ್ನು ನಮ್ಮ ರಾಜಕಾರಣಿಗಳು ಮತ್ತು ಯೋಜನಾತಜ್ಞರು ಮತ್ತು ಅರ್ಥಶಾಸ್ತ್ರಜ್ಞರು ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

೨೦೦೬-೦೭ನೇ ಸಾಲಿಗೆ ದೇಶದ ಆರ್ಥಿಕ ಅಭಿವೃದ್ಧಿ ಪ್ರಮಾಣವನ್ನು ಶೇ.೧೦ ಕ್ಕೆ ಏರಿಸಲಾಗುತ್ತದೆಂದು ಪ್ರಧಾನಮಂತ್ರಿ ಮನಮೋಹನಸಿಂಗ್‌ರವರು ಹೇಳುತ್ತಿದ್ದಾರೆ. ದೇಶದ ಈ ಆರ್ಥಿಕ ಅಭಿವೃದ್ಧಿಯನ್ನು ಸರಾಸರಿ ಎಂಬ ಅಳತೆಗೋಲಿಗೆ ಒರೆ ಹಚ್ಚಿದಾಗ ನೀರಿನ ಸರಾಸರಿ ಆಳವನ್ನು ತಿಳಿದು ಹೊಳೆಯನ್ನು ದಾಟಲು ಪ್ರಯತ್ನಿಸಿ ಮುಳುಗಿದ ಮೂರ್ಖ ವ್ಯಕ್ತಿಯಂತೆ ನಮ್ಮ ದೇಶದ ನಾಯಕರು ಮಾತನಾಡುತ್ತಿರುವುದು ನಿಜವಾಗಿಯು ಬಹು ಭಯಾನಕವಾದ ವಿಷಯ. ಆರ್ಥಿಕ ವಲಯಗಳ ಸ್ಥಾಪನೆಯಲ್ಲಿ ಯಾವುದೂ ನೇರ ವ್ಯವಹಾರವಿರುವುದಿಲ್ಲ. ಅಲ್ಲಿ ರಾಜಕೀಯ ಒತ್ತಡಗಳು, ಭ್ರಷ್ಟಾಚಾರ ಮುಂತಾದ ಸಮಾಜವಿರೋಧಿ ಶಕ್ತಿಗಳು ಕೆಲಸ ಮಾಡುತ್ತವೆ. ಸ್ವಾತಂತ್ರ್ಯ ಬಂದ ನಂತರ ಭೂ ಸಮಸ್ಯೆಯನ್ನು ಪರಿಹರಿಸಬೇಕೆಂದು ದೊಡ್ಡ ಕೂಗೆದ್ದಿತ್ತು ಮತ್ತು ಅದಕ್ಕಾಗಿ ಅನೇಕ ಶಾಸನಗಳು ಬಂದವು. ಆದರೆ ಈಗ ಸ್ಥಾಪಿತಗೊಳ್ಳುತ್ತಿರುವ ವಿಶೇಷ ಆರ್ಥಿಕ ವಲಯಗಳು ಎಲ್ಲ ಪ್ರಕಾರದ ಭೂ ಸುಧಾರಣಾ ಶಾಸನಗಳನ್ನೂ ಮೀರಿ ನಿಲ್ಲುತ್ತಿವೆ ಮತ್ತು ಆ ಶಾಸನಗಳನ್ನು ನಿರಸನಗೊಳಿಸುತ್ತಿವೆ. ಸ್ವಾತಂತ್ರೋತ್ತರದಲ್ಲಿ ಇದಕ್ಕಿಂತ ದೊಡ್ಡ ಆಘಾತಕಾರಿ ಸಂಗತಿ ಇನ್ನೊಂದಾಗಲಾರದು. ಇದುವರೆಗೆ ಜಾರಿಗೆ ಬಂದ ಹತ್ತು ಪಂಚವಾರ್ಷಿಕ ಯೋಜನೆಗಳು ದೇಶದಲ್ಲಿಯ ಶ್ರೀಮಂತರನ್ನು ಹೆಚ್ಚು ಶ್ರೀಮಂತರನ್ನಾಗಿಯೂ, ಬಡವರನ್ನು ಹೆಚ್ಚು ಬಡವರನ್ನಾಗಿಯೂ ಮಾಡುವುದರಲ್ಲಿಯೇ ತಮ್ಮ ಯಶಸ್ಸನ್ನು ಕಂಡವು. ಈಗ ಉದ್ಭವವಾಗುತ್ತಿರುವ ವಿಶೇಷ ಆರ್ಥಿಕ ವಲಯಗಳು ಆ ಪ್ರಕ್ರಿಯೆಗೆ ಕಳಸವನ್ನಿಡುತ್ತಿವೆ.

ನಮ್ಮ ಪ್ರಜಾಪ್ರಭುತ್ವದ ಯಶಸ್ಸು ಆರ್ಥಿಕ ವಿಕೇಂದ್ರೀಕರಣ, ಅಧಿಕಾರದ ವಿಕೇಂದ್ರೀಕರಣ ಮತ್ತು ಸಂಪತ್ತಿನ ವಿಕೇಂದ್ರೀಕರಣವನ್ನವಲಂಬಿಸಿದೆ. ಎಲ್ಲಿಯವರೆಗೆ ವಿಕೇಂದ್ರೀಕರಣದ ತತ್ವವು ನಮ್ಮ ರಾಷ್ಟ್ರಜೀವನದ ಮುಖ್ಯಸಿದ್ಧಾಂತವಾಗುವುದಿಲ್ಲವೊ ಅಲ್ಲಿಯವರೆಗೆ ನಮ್ಮ ದೇಶ ನಿಜವಾದ ಅರ್ಥದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ, ನೈತಿಕವಾಗಿ ಬಲಿಷ್ಠ ದೇಶವಾಗುವುದಿಲ್ಲ. ಇಂದು ಮುಖ್ಯವಾಗಿ ಆಗಬೇಕಾಗಿರುವುದು ಹಣದ ಸಮಾನ ಹಂಚಿಕೆ. ಇದು ವಿಕೇಂದ್ರೀಕೃತ ಉದ್ಯೋಗ ಮತ್ತು ವಿಕೇಂದ್ರಿತ ಅರ್ಥನೀತಿಯಿಲ್ಲದೆ ಸಾಧ್ಯವಾಗಲಾರದು. ಈ ದಿಸೆಯಲ್ಲಿ ಆಗಬೇಕಾಗಿರುವುದು ಮನೆ-ಮನೆಯಲ್ಲಿ ಉದ್ಯೋಗ, ಹಳ್ಳಿ-ಹಳ್ಳಿಗಳಲ್ಲಿ ಉದ್ಯೋಗ ಮತ್ತು ಉದ್ಯೋಗಗಳ ಮೂಲಕ ತಯಾರಾಗುವ ಉತ್ಪಾದನೆಗಳ ಸಮುಚಿತ ವಿಲೇವಾರಿ. ಎಲ್ಲಿಯೂ ಶೋಷಣೆಗೆ ಅವಕಾಶವಿರದಂಥ ಅಭಿವೃದ್ಧಿಯ ಯೋಜನಾ ಪದ್ಧತಿ ಇಂದಿನ ಅಗತ್ಯವಾಗಿದೆ. ಆದ್ದರಿಂದ ಈಗ ಜಾರಿಗೆ ಬರುತ್ತಿರುವ ವಿಶೇಷ ಆರ್ಥಿಕ ವಲಯಗಳ ಯೋಜನೆಯ ಎಲ್ಲಾ ವಿವರಗಳು ಆದಷ್ಟು ಬೇಗ ಜನಸಾಮಾನ್ಯರಿಗೆ ಅದರಲ್ಲೂ ಮುಖ್ಯವಾಗಿ ವ್ಯವಸಾಯವನ್ನವಲಂಬಿಸಿರುವ ಜನತೆಗೆ ತಿಳಿಸುವ ಪ್ರಯತ್ನ ಮಾಡಬೇಕು. ಅವರನ್ನು ಅಂಧಕಾರದಲ್ಲಿಟ್ಟು ಸ್ಥಾಪಿತವಾಗುವ ವಿಶೇಷ ಆರ್ಥಿಕ ವಲಯಗಳು ಒಂದರ್ಥದಲ್ಲಿ ಸಾಮಾನ್ಯ ಜನರ ಶವಗಳ ಮೇಲೆ ಸಮಾಧಿಯನ್ನು ಕಟ್ಟಿದಂತಾಗುತ್ತದೆ. ಉದ್ದೇಶಿತ ವಿಶೇಷ ಆರ್ಥಿಕ ವಲಯಗಳ ಯೋಜನೆ ಕೇವಲ ಅತ್ಯಾಧುನಿಕ ಕೈಗಾರಿಕೆಗಳಿಗೆ ಮಾತ್ರ ಸೀಮಿತಗೊಳ್ಳದೆ ವ್ಯವಸಾಯಾಧಾರಿತ ಖಾದಿ-ಗ್ರಾಮೋದ್ಯೋಗಗಳಿಗೂ ಅನ್ವಯವಾಗಬೇಕು. ಬೃಹತ್ ಕೈಗಾರಿಕೆಗಳೆಂಬ ದೊಡ್ಡ ಮೀನುಗಳು ಖಾದಿ-ಗ್ರಾಮೋದ್ಯೋಗಗಳೆಂಬ ಚಿಕ್ಕ ಮೀನುಗಳನ್ನು ತಿನ್ನದಂತೆ ಖಾದಿ-ಗ್ರಾಮೋದ್ಯೋಗಗಳಿಗಾಗಿಯೇ ಅವುಗಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿಯೇ ದೇಶದಾದ್ಯಂತ ಹಲವಾರು ವಿಶೇಷ ಆರ್ಥಿಕ ವಲಯಗಳು ಕಡ್ಡಾಯವಾಗಿ ಇರಲೇಬೇಕು. ಈ ವಿಷಯವಾಗಿ ನಮ್ಮ ಜನ ಎಚ್ಚೆತ್ತುಕೊಳ್ಳಬೇಕು ಮತ್ತು ಕ್ಷಣಮಾತ್ರದ ಅಭಿವೃದ್ಧಿಯ ಲಾಲಸೆಗೆ ಸೋತು ಶಾಶ್ವತ ಅಭಿವೃದ್ಧಿಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಚರಕ ಶೋಷಣೆ ರಹಿತ, ವಿಕೇಂದ್ರಿತ, ಸರಳ ಮತ್ತು ಪರಿಸರ ಸ್ನೇಹಿ ಕೈಗಾರಿಕೆಗಳ ಸಂಕೇತವಾಗಿದ್ದರೆ. ವಿಶೇಷ ಆರ್ಥಿಕ ವಲಯಗಳು ಅತಿ ಕೇಂದ್ರಿತ, ಅತಿ ಶೋಷಣೆಯ, ಅತಿ ಪರಿಸರ ನಾಶದ ಸಂಕೇತಗಳಾಗಿವೆ. ನಾವು ಭಾರತೀಯರು ಭಾರತದ ಸಂಸ್ಕೃತಿಯ ಪ್ರತೀಕವಾದ ಚರಕ ರೂಪಕದ ಜೀವನ ಪದ್ಧತಿಯನ್ನು ಅಂಗೀಕರಿಸೋಣ. ಆ ಸುರಿ ಗುಣಗಳ ಸಂಕೇತವಾದ ವಿಶೇಷ ಆರ್ಥಿಕ ವಲಯಗಳನ್ನು ತಿರಸ್ಕರಿಸೋಣ.

* * *

ಕಾಲ ಪ್ರವಾಹದಲ್ಲಿ ವೇದ

- ವಿನೋಬಾ

ಕಾಲಪುರುಷನು ಪರೀಕ್ಷೆ ಮಾಡುತ್ತಾನೆ. ಕಾಲದ ಪರೀಕ್ಷೆಯಲ್ಲಿ ಯಾವುದಕ್ಕೆ ಬೆಲೆಯಿಲ್ಲವೊ ಅದು ೫೦ ವರ್ಷಗಳಲ್ಲಿ, ೧೦೦-೨೦೦ ವರ್ಷಗಳಲ್ಲಿ ಪತಿತವಾಗುತ್ತದೆ. ಅತ್ಯಂತ ಉತ್ತಮವಾದುದು ಕಾಲಪುರುಷನ ಪರೀಕ್ಷೆಯಲ್ಲಿ ಉಳಿಯುತ್ತದೆ. ಅಂಥ ಪರೀಕ್ಷೆ ವೇದದ್ದಾಗಿದೆ. ೧೦-೧೨ ಸಾವಿರ ವರ್ಷದಿಂದ ಕಾಲಪುರಷನು ಅದರ ಪರೀಕ್ಷೆ ಮಾಡಿದ್ದಾನೆ. ವೇದ ಬೀಜವು ಉಪಯುಕ್ತವಾಗಿರದೆ ಹೋಗಿದ್ದರೆ ೧೦-೧೨ ಸಾವಿರ ವರ್ಷ ಉಳಿಯುತ್ತಿರಲಿಲ್ಲ.

ಸಂಸ್ಕೃತ ಭಾಷೆಯ ಆರಂಭವು ವೇದ-ವಾಣಿಯೊಂದಿಗೆ ಆಯಿತು. ಅದರ ಆರಂಭವೇ ಬಹಳ ಗಂಭೀರವಾಗಿದೆ; ಗಂಗಾನದಿ ಆಳವಾದ ಗುಹೆಯಿಂದ ಹೊರಬರುತ್ತಿರುವ ರೀತಿಯಲ್ಲಿ. ಈ ಗೂಢ ಗುಹೆಯನ್ನು ತಲುಪುವುದು ಕಠಿಣ. ತಲುಪಿದ ಮೇಲೆ ಅಲ್ಲಿಂದ ಹಿಂದಿರುಗುವ ಇಚ್ಛೆಯೇ ಆಗುವುದಿಲ್ಲ. ಇಂಥ ರಮಣೀಯ ದೃಶ್ಯವುಳ್ಳ ಸ್ಥಾನ ಸಂಸ್ಕೃತದ ಉಗಮ ಸ್ಥಾನವಾಗಿದೆ. ಋಗ್ವೇದವನ್ನು ವಾಣಿಯ ರಸವೆಂದು ತಿಳಿಯಲಾಗುತ್ತದೆ. ಉಪನಿಷತ್ತುಗಳು ಅದನ್ನು ವಾಚಋಗ್‌ರಸಃ ಎಂದು ಹೇಳಿದೆ. ವೇದವನ್ನು ಪ್ರಪಂಚದ ಪ್ರಥಮ ಗ್ರಂಥವೆಂದೂ ತಿಳಿಯಲಾಗುತ್ತದೆ. ಈ ವಿಷಯ ಚರ್ಚಾಸ್ಪದವಿರಬಹುದು. ಆದರೆ ವೇದವು ನಮ್ಮ ದೇಶದ ಪ್ರಥಮ ಗ್ರಂಥವೆಂಬುದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಕೆಲವು ಜನರು ತಿಳಿದಿರುವಂತೆ ಆ ಪ್ರಥಮ ಗ್ರಂಥವು 'ಬಾಲ ಭಾಷಿತ'ವಲ್ಲ. ಅಂದರೆ, ಮಾನವ ಸಮಾಜವು ಬಾಲ್ಯಾವಸ್ಥೆಯಲ್ಲಿದ್ದಾಗ ಯಾವ ವಿಚಾರಗಳು ಹೊಳೆದವೋ, ಅಂದರೆ ಮಕ್ಕಳಿಗೆ ಹೊಳೆಯುವಂಥ ವಿಚಾರಗಳು ಋಗ್ವೇದದಲ್ಲಿ ತುಂಬಿವೆ ಎಂದು ಭಾವಿಸಿರುವಂತೆ ಅಲ್ಲ. ಎಲ್ಲೋ ಒಂದೆರಡು ಕಡೆ ಸಾಂಸ್ಕೃತಿಕ ವಿಚಾರದ ಮಿಂಚು ನೋಡಲು ಸಿಗುತ್ತದೆ ಆದರೂ ಕೂಡ ಅದರಲ್ಲಿ ಮುಖ್ಯವಾಗಿ ಪ್ರಾಕೃತಿಕ ವಿಚಾರವೇ ಇದೆ. ಈ ಪ್ರಕಾರದ ಗೀತೆಗಳುಳ್ಳಂಥ ಸಂಗ್ರಹವೊಂದು ಐತಿಹಾಸಿಕ ದೃಷ್ಟಿಯಿಂದ ರಚಿತವಾಗಲು ಸಾಧ್ಯವಿಲ್ಲ. ಎಂಥ ಶ್ರದ್ಧೆಯಿಂದ ಜನರು ಈ ಸಂಗ್ರಹವನ್ನು ಮಾಡಿದ್ದಾರೆಂದು ನೋಡಿದಾಗ ವೇದವನ್ನು ಬಾಲಭಾಷೆಯೆಂದು ಒಪ್ಪಲಾಗುವುದಿಲ್ಲ. ನಾನು ವೇದವನ್ನು ಅವಲೋಕಿಸಿದ್ದೇನೆ. ನನಗೆ ಅದರ ಸಮ್ಯಕ್ ಜ್ಞಾನವಿಲ್ಲವೆಂದು ಹೇಳಲಾರೆ. **ಸ್ವಾಧ್ಯಾಯಾತ್ ಇಷ್ಟದೇವತಃ ಸಂಪ್ರಯೋಗಃ** ಆಯಿತು. ಸ್ವಾಧ್ಯಾಯದಿಂದ ಇಷ್ಟ ದೇವತೆಯ ಸಾಕ್ಷಾತ್ಕಾರವಾಗುತ್ತದೆ. ನನಗೆ ವೇದದಬಗ್ಗೆ

ಸರಿಯಾದ ಅರ್ಥವಾಗಲಾರಂಭಿಸಿತು. ಈ ಛಂದೋಬದ್ಧ ವಾಣಿಯಲ್ಲಿ ಅತ್ಯಂತ ಗಂಭೀರ ವಿಷಯಗಳನ್ನು ಹೇಳಲಾಗಿದೆಯೆಂದೂ, ಆ ವಾಣಿಯ ಅಧ್ಯಯನವನ್ನು ಮಾಡಿದಂಥವರಿಗೆ ಅಮೃತಲಬ್ಧವಾಗುವುದೆಂದೂ ಹೇಳಬಹುದಾಗಿದೆ. ಋಗ್ವೇದವು ಸಂಸ್ಕೃತ ಭಾಷೆಯ ಬಹು ಗಂಭೀರ ಆರಂಭವಾಗಿದೆ.

ವೇದವು ಒಂದು ಬಹು ಪುರಾತನ ವಿಷಯ. ಜಗತ್ತಿನ ಮೊದಲ ಗ್ರಂಥ ವೇದವೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತದೆ. ಚೀನಾ ಕೂಡ ಪ್ರಾಚೀನ ದೇಶ. ಅಲ್ಲಿಯೂ ಸಹ ಹಳೆಯ ಗ್ರಂಥಗಳಿರುವ ಸಾಧ್ಯತೆಯಿದೆ. 'ಹಳೆಯ ಒಡಂಬಡಿಕೆ'ಯ ಸ್ವಲ್ಪ ಭಾಗವು ಕೂಡ ಬಹು ಹಳೆಯದೆಂದು ತಿಳಿಯಲಾಗುತ್ತದೆ. ಆದ್ದರಿಂದ ವೇದವೇ ಹಳೆಯದೆಂದು ನಿಶ್ಚಿತವಾಗಿ ಹೇಳಲಾಗದು. ಆದರೆ ಭಾರತದ ಮಟ್ಟಿಗೆ ಹೇಳುವುದಾದರೆ ಋಗ್ವೇದವು ಇಲ್ಲಿಯ ಮೊದಲ ಗ್ರಂಥವಾಗಿದೆ. ಹಾಗಾದರೆ ಇದನ್ನು ಆದಿಶಬ್ದವೆಂದು ಒಪ್ಪಲಾಗುವುದೆ? ಋಗ್ವೇದದಲ್ಲಿ ಋಷಿ ಹೇಳಿದ ಕೆಲವು ವಾಕ್ಯಗಳು ಈ ರೀತಿ ಇವೆ – ಏನ ನಹ ಪೂರ್ವೆ ಪಿತರಃ (೧.೧೧.೬) ನಮಗೆ ಪೂರ್ವಜರಿದ್ದರು, ಪಿತರರಿದ್ದರು, ಅವರು ಪದಜ್ಞರಿದ್ದರು ; ಬ್ರಹ್ಮವೇತ್ತರಾದ ಋಷಿಗಳಿದ್ದರು, ಅಂದರೆ ಋಗ್ವೇದದಲ್ಲಿ ಬಂದಿರುವ ವಚನಗಳೇನಿವೆಯೋ ಅವು ಮೊದಲೂ ಇದ್ದವು. ಅದಕ್ಕೂ ಮೊದಲು ಬ್ರಹ್ಮವೇತ್ತರರು ಆಗಿ ಹೋಗಿರಬಹುದು.

ವಸಿಷ್ಠರು ಹೇಳುತ್ತಾರೆ – **ಗುಳೂಹಂ ಜ್ಯೋತಿ ಪಿತರೊ ಅನ್ವವಿಂದನ್** (೭.೯.೧೦) – ನಮ್ಮ ಪಿತರು ಗೂಢ ಜ್ಯೋತಿಯ ಶೋಧನೆ ಮಾಡಿದ್ದರು. ಹೃದಯದಲ್ಲಿರುವಂಥ ಜ್ಯೋತಿ – ಆ ಜ್ಯೋತಿಯ ಶೋಧ. ವೇದದ ದ್ರಷ್ಟಾರರೆಂದು ಯಾವ ಋಷಿಗಳನ್ನು ನಾವು ಒಪ್ಪುತ್ತೇವೋ ಅವರು ಕೂಡಾ ತಮ್ಮ ಪೂರ್ವಜರ ಹೆಸರನ್ನೆತ್ತಿಕೊಂಡೆ ಮಾತನಾಡುತ್ತಾರೆ! ಇದರ ಅರ್ಥವಿಷ್ಟೆ : ಪ್ರಾಚೀನ ಪಿತರರ ಸ್ಮರಣೆಯನ್ನು ನಾವು ವೇದಕಾಲದಿಂದಲೂ ಮಾಡುತ್ತಾಬಂದಿದ್ದೇವೆ. ವೈದಿಕ ಋಷಿಗಳು ತಮಗಿಂತ ಪ್ರಾಚೀನರಾಗಿದ್ದ ಋಷಿಗಳ ಆಧಾರವನ್ನು ಕೊಡುತ್ತಾರೆ. ಇವು ೨೦,೦೦೦ ವರ್ಷಗಳಷ್ಟು ಹಳೆಯದಾಗಿವೆ. ಅಂದರೆ ಅವರ ಪ್ರಾಚೀನರು ಇನ್ನೂ ಮೊದಲಿನವರಾಗಿದ್ದಾರೆ. ಇಷ್ಟೊಂದು ದೀರ್ಘಕಾಲದ ಪರಂಪರೆ ಪ್ರವಹಿಸಿದೆ.

ವೇದಕಾಲದ ನಿರ್ಣಯವನ್ನು ಮಾಡುವ ಕೆಲಸದಲ್ಲಿ ಜ್ಯೋತಿಷ್ಯದ ಉಪಯೋಗವನ್ನು ಮಾಡಲಾಗಿದೆ. ಲೋಕಮಾನ್ಯ ತಿಲಕರು ಮತ್ತು ಅವರ ನಂತರ ಅನೇಕರು ಈ ವಿಷಯದ ಬಗ್ಗೆ ತಮ್ಮ ಲೇಖನಿಯನ್ನು ಉಪಯೋಗಿಸಿದ್ದಾರೆ. ಜ್ಯೋತಿಷ್ಯದ ಆಧಾರ ಹಾಗೂ ಋಗ್ವೇದದ ವಚನಗಳ ಆಧಾರದಿಂದ ವೇದಕಾಲವು ೧೮ ರಿಂದ ೨೦ ಸಾವಿರ ವರ್ಷ ಪೂರ್ವದ್ದೆಂದು ತೋರಿಸಲಾಗಿದೆ. ಭಾಷೆ ಮತ್ತು ವಿಚಾರ ವಿಕಾಸದ ಕೆಲ ಗಣಿತ ಮಾಡಿ ನಾನು ಕೂಡ ಇದೇ ವೇದದ

ಕಾಲವೆಂದು ತಿಳಿದ್ದಿದ್ದೇನೆ. ನಾನು ಆ ಗಣಿತವನ್ನು ಮತ್ತು ಉಳಿದ ಅಂಶಗಳನ್ನು ಜನರ ಮುಂದೆ ಇಟ್ಟಿರುವುದಿಲ್ಲ.

ಅನಂತಪಾರಂ ಗಂಭೀರಂ – ಎಂಬುದಾಗಿ ಭಾಗವತದಲ್ಲಿ ವೇದದ ವರ್ಣನೆಯನ್ನು ಮಾಡಲಾಗಿದೆ.

ಇದು ಪೂರ್ಣತಃ ಸರಿ. ವೇದವನ್ನು ಅನಾದಿ ಎಂಬುದಾಗಿ ತಿಳಿಯಲಾಗಿದೆ. ಅಂದರೆ ಅದರ ಜನ್ಮ ಯಾವಾಗ ಆಯಿತೆಂಬ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಇದು ಇತಿಹಾಸ ಕಾಲಕ್ಕೂ ಪೂರ್ವದ್ದು, "ಪ್ರಿ ಹಿಸ್ಟಾರಿಕ್" ಎಂಬ ಸಮಯವಿತ್ತು. ಶಾಸ್ತ್ರಜ್ಞರು ಕೂಡ ಈ ಮಾತನ್ನು ಒಪ್ಪಿದ್ದಾರೆ. ವಾಣಿಯ ಸ್ವರೂಪ ರಚನೆಯಾಗುತ್ತಿದ್ದ ಕಾಲದಲ್ಲಿ ವೇದಗ್ರಂಥ ರಚನೆಯಾಯಿತು!

ಇಲ್ಲಿ ಒಂದು ಮೂಲ ಪ್ರಶ್ನೆ ಉದ್ಭವಿಸುತ್ತದೆ. ಅದು ಶಬ್ದ ಹೇಗಾಯಿತೆಂಬುದು. ಒಂದು ಕಾಗೆ ಕಾವ್ ಕಾವ್ ಎಂದು ಕೂಗಿದ ಕೂಡಲೆ ಎಲ್ಲ ಕಾಗೆಗಳೂ ಒಟ್ಟು ಸೇರುತ್ತವೆ. ಏಕಾಗಿ? ಒಂದು ಎತ್ತು ಸತ್ತು ಬಿದ್ದಿರುವುದನ್ನು ಕಾಗೆ ನೋಡಿತು, ತನ್ನ ಜೊತೆಗಾರರನ್ನು ಕರೆಯಿತು. ಅಪಾಯ ಬಂದಾಗಲೂ ಅದೇ ಕಾವ್ ಕಾವ್ ಎಂದು ಕೂಗು. ಎಲ್ಲ ಕಾಗೆ ಓಡಿಹೋಗುತ್ತವೆ. ಆದರೆ ಈ ಎರಡು ಸಮಯದಲ್ಲಿಯ ಕಾವ್ ಕಾವ್ ಶಬ್ದದಲ್ಲಿ ವ್ಯತ್ಯಾಸವಿದೆ. ಒಂದರಲ್ಲಿ ಆನಂದವಿದ್ದರೆ ; ಎರಡನೆಯದರಲ್ಲಿ ಅಂಜಿಕೆ. ಪ್ರೀತಿ, ಭಯ, ಆನಂದ ಇತ್ಯಾದಿ ಅನೇಕ ಪ್ರಕಾರದ ಭಾವನೆಗಳು ಒಂದೇ ಕಾವ್ ಕಾವ್‌ನಲ್ಲಿ ಪ್ರಕಟಗೊಳ್ಳುತ್ತದೆ. ಆದ್ದರಿಂದ ಪ್ರಾರಂಭದಲ್ಲಿ ಕ್ರಿಯೆನೋಡಿ ಶಬ್ದದ ರಚನೆಯಾಗಿರಬಹುದೆಂದೆನಿಸುತ್ತದೆ. ಸಂಸ್ಕೃತ ಶಬ್ದದಲ್ಲಿ ಪ್ರತ್ಯೇಕ ಶಬ್ದವು ಧಾತು ಮೂಲಕವಿದೆ. ಆದ್ದರಿಂದ ಸಮ್ಮಿಲಿತ ಚಿಂತನದ ಸ್ವರೂಪವಾಗಿ ಶಬ್ದಗಳು ರಚನೆಗೊಂಡಿರಬಹುದೆಂದೆನಿಸುತ್ತದೆ. ಈ ಇಡೀ ಪ್ರಕ್ರಿಯೆಯಲ್ಲಿ ಲಕ್ಷಾಂತರ ವರ್ಷಗಳೆ ಕಳೆದಿರಬಹುದು. ಆದ್ದರಿಂದ ಪರಮಾತ್ಮನ ಪ್ರೇರಣೆಯಿಂದಲೇ ಶಬ್ದ ಹೊರಟಿತೆಂದು ತಿಳಿಯಬೇಕಾಗುತ್ತದೆ.

ಶಬ್ದದ ರಚನೆಯಾದ ನಂತರ ಕೆಲಸ ಸುಲಭವಾಯಿತು. ಶಬ್ದದ ರಚನೆಯಾದ ನಂತರ ಮಾಡಲಾದ ಪರಾಕ್ರಮವೆಲ್ಲವೂ ಗೌಣವೆ. 'ಸತ್ಯ' ಶಬ್ದ ನಮಗೆ ದೊರೆಯಿತು. ನಾವು ಆ ಶಬ್ದದ ಶೋಧನೆಯನ್ನಾಗಲಿ, ಪ್ರಯೋಗವನ್ನಾಗಲಿ ಮಾಡಿದ್ದಿಲ್ಲ. ಆ ಶಬ್ದ ದೊರೆತ ನಂತರವಷ್ಟೆ ನಾವು ಅದರ ಪ್ರಯೋಗ ಮಾಡಿದೆವು. ಅದರಿಂದಾಗಿ ಸತ್ಯಾಗ್ರಹ ಎಂಬಂಥ ಹೊಸ ಶಬ್ದವನ್ನು ರಚಿಸಿದೆವು, ಆದರೆ ಸತ್ಯ ಶಬ್ದ ಹೇಗೆ ರಚಿತವಾಯಿತು, ಅದು ಮೊದಲ ಬಾರಿಗೆ ಯಾರಿಗೆ ಸಿಕ್ಕಿತು ಇದೆಲ್ಲ ನಮಗೆ ಗೊತ್ತಿಲ್ಲ. ಋಗ್ವೇದದಲ್ಲಿ ಇಂಥ ಸಾವಿರಾರು ಶಬ್ದಗಳಿವೆ. ಋಗ್ವೇದದ ಮೊದಲು ಕೂಡ ಇಂಥ ಅನೇಕ ಶಬ್ದಗಳಿದ್ದವು.

ಶಬ್ದ-ಬ್ರಹ್ಮ ನಮಗೆ ಪ್ರಮಾಣಭೂತವಾಗಿದೆ ಆದರೆ ಶಬ್ದಗಳನ್ನು ಬಿಟ್ಟು

ನಾವು ಮಾತನಾಡಲಾರೆವು.

ಶಬ್ದದ ಉಪಯೋಗವನ್ನೇ ಮಾಡದಿದ್ದರೆ ಹೇಗೆ ತಾನೆ ಮಾತನಾಡಬಲ್ಲೆವು? ನಮ್ಮ ನಮ್ಮ ಭಾವನೆಗಳನ್ನು ನಾವು ಶಬ್ದಗಳ ಮೂಲಕವೆ ಪ್ರಕಟಗೊಳಿಸಬೇಕಾಗುತ್ತದೆ. ಸಾವಿರಾರು ಶಬ್ದಗಳು ಈ ರೀತಿ ರಚಿತಗೊಂಡಿವೆ. ಆದ್ದರಿಂದ ಯಾವ ಕಾಲದಲ್ಲಿ ಶಬ್ದಗಳು ರೂಪಗೊಳ್ಳುತ್ತಿದ್ದವೊ ಆ ಪ್ರಕ್ರಿಯೆಯಲ್ಲಿಯೆ ವೇದಗ್ರಂಥ ಕೂಡ ರಚಿತವಾಯಿತೆಂದು ತಿಳಿಯಬೇಕಾಗುತ್ತದೆ.

ವೇದದಲ್ಲಿ ವಿವಿಧ ಸ್ಥರದ ವಾಣಿ ಕಂಡು ಬರುತ್ತವೆ. ಕೆಲವು ಬಹು ಪ್ರಾಚೀನವಾಗಿದ್ದರೆ ಇನ್ನು ಕೆಲವು ಅನಂತರದ್ದಾಗಿವೆ. ಋಗ್ವೇದವು ಒಂದೇ ಕಾಲದ್ದಾಗಲಿ ಅಥವಾ ಒಬ್ಬ ಪುರಷನಿಂದಾಗಲಿ ರಚಿತವಾದುದಲ್ಲ. ವೇದಗಳದು ಕ್ರಮಶಃ ವಿಕಾಸ ಆಗಿದೆ. ವೇದಗಳ ಅತಿ ಪ್ರಾಚೀನ ಭಾಗ ೨೦ ಸಾವಿರ ವರ್ಷಗಳಷ್ಟು ಹಳೆಯದಿದೆ; ಮತ್ತು ಅತಿ ಅರ್ವಾಚಿನ ಭಾಗ ೧೦ ಸಾವಿರ ವರ್ಷಗಳಷ್ಟು ಹಳೆಯದಾದರೂ ಇರಬಹುದು. ಇದರ ಹೊರತಾಗಿಯೂ ೫ ಸಾವಿರ ವರ್ಷಗಳವರೆಗೆ ವೇದಗಳ ಬೆಳವಣಿಗೆ ಮತ್ತು ವಿಕಾಸ ಆಗುತ್ತಾ ಬಂದಿದೆ. ಋಗ್ವೇದದ ಕಾಲ ೨೦,೦೦೦ ದಿಂದ ೧೦,೦೦೦ ವರ್ಷಗಳವರೆಗಿನದ್ದಾಗಿದೆ, ಉಳಿದ ವೇದಗಳ ಕಾಲ ೧೦,೦೦೦ ದಿಂದ ೬,೦೦೦ ವರ್ಷಗಳವರೆಗಿನದ್ದಾಗಿದೆ. ಈ ಕಾಲವನ್ನು ವೈದಿಕ ಕಾಲವೆಂದು ತಿಳಿಯಲಾಗುತ್ತದೆ. ಇದಾದ ನಂತರ ಬ್ರಾಹ್ಮಣ ಮತ್ತು ಉಪನಿಷತ್ ಕಾಲ ಆರಂಭವಾಗುತ್ತದೆ. ಇವುಗಳಲ್ಲಿ ವೇದಗಳ ವಿನಿಯೋಗ, ಉಪಯೋಗ ಮತ್ತು ಪ್ರಯೋಗಗಳ ವರ್ಣನೆ ಇದೆ.

ಬಾದರಾಯಣದ ಬ್ರಹ್ಮಸೂತ್ರ ಸುಮಾರು ೨,೨೦೦ ವರ್ಷಗಳ ಹಿಂದಿನದ್ದಾಗಿದೆ. ಅದರಲ್ಲಿ ದೃಷ್ಟಿ ಸಮನ್ವಯವನ್ನು ಮಾಡಲಾಗಿದೆ. ಸಮನ್ವಯಕ್ಕಾಗಿ ಬಾದರಾಯಣರು ಉಪನಿಷತ್ತನ್ನು ಆಯ್ಕೆ ಮಾಡಿಕೊಂಡು ವೇದವನ್ನು ಬಿಟ್ಟರು. ವೇದವನ್ನು ಆದರಪೂರ್ವಕವಾಗಿ ಪ್ರತ್ಯೇಕವಾಗಿರಿಸಿದರು. ಆದರೆ ಉಪನಿಷತ್ತು ತಸ್ಯ ವೇದ ಅವೇದಾಃ ಜ್ಞಾನಿಗಳಿಗೆ ವೇದಗಳು ಅವೇದಗಳಾದವು. ಬ್ರಹ್ಮವಿದ್ಯೆಗಾಗಿ ಅವು ಅಗತ್ಯವೆಂದು ತಿಳಿಯಲಾಗಲಿಲ್ಲ. ಇದರ ಪರಿಣಾಮವಾಗಿ ವೇದದ ಅಧ್ಯಯನವೇ ಕಡಿಮೆಯಾಯಿತು. ಮುಖಪಾಠ ಮಾಡುವ ಬ್ರಾಹ್ಮಣರು ಇದ್ದಾರೆ. ಇದರಿಂದ ಸಾಮಾಜಿಕ ಕಾರ್ಯಗಳಲ್ಲಿ ವೇದಗಳ ಉಪಯೋಗವಾಗುತ್ತದೆ. ಆದರೆ ಯಾವುದನ್ನು ನಾವು ಅಧ್ಯಯನವೆಂದು ಕರೆಯುತ್ತೇವೋ ಅದು ಮಧ್ಯಯುಗದಲ್ಲಿ ನಡೆಯಲೇ ಇಲ್ಲ. ಸುಮಾರು ಎರಡೂ ಎರಡೂವರೆ ಸಾವಿರ ವರ್ಷಗಳಲ್ಲಿ ವೇದಗಳ ವಿಶೇಷ ಅಧ್ಯಯನವಾಗಲಿಲ್ಲ. ವೇದಗಳ ಫಲಸ್ವರೂಪವಾಗಿಯೇ ಉಪನಿಷತ್ತಾದಿಗಳಿವೆ. ಅವುಗಳ ಅಧ್ಯಯನವನ್ನೇ ಜನರು ಮಾಡುತ್ತಾ ಬಂದಿದ್ದಾರೆ. ಇದು ಕೂಡ ಸರಿ. ಯಾರು ಹಣ್ಣನ್ನು ತಿಂದರೋ ಅವರು ಬೀಜದ ಸಾರವನ್ನು

ತಿಂದಂತೆಯೆ ಆಯಿತು. ವೇದವು ಬೀಜವೆ ಹೌದು. ಉಪನಿಷತ್ತಾದಿಗಳು ಹಣ್ಣುಗಳಂತೆ. ಸಾಮಾನ್ಯ ಜನರಿಗೆ ಹಣ್ಣನ್ನು ತಿನ್ನುವುದರಲ್ಲಿಯೇ ಸಂತೋಷವಾಗುತ್ತದೆ. ಆದ್ದರಿಂದ ವೇದಬೀಜದ ಸ್ವಾದವನ್ನು ಅನುಭವಿಸುವುದರಲ್ಲಿ ಯಾರಿಗೂ ವಿಶೇಷ ಇಚ್ಛೆ ಇರುತ್ತಿರಲಿಲ್ಲ. ಯಾರ ಪಾಲಿಗೆ ಬೀಜ ನೆಡುವ ಕೆಲಸ ಬಂತೊ ಅವರು ವೇದಗಳ ಅಧ್ಯಯನ ಮಾಡುವಂತಾಯಿತು.

ಮಧ್ಯಕಾಲದಲ್ಲಿ ವೇದಗಳನ್ನು ಸಂಪೂರ್ಣವಾಗಿ ಸುರಕ್ಷಿತವಾಗಿಡಲಾಗಿತ್ತು. ಇವುಗಳ ಸಂರಕ್ಷಣೆಯ ಭಾರವನ್ನು ಹೊತ್ತಿದ್ದವರು ಕೂಡ ಅವುಗಳ ಅರ್ಥ ಮಾಡಿಕೊಳ್ಳಬಾರದೆಂಬುವಷ್ಟರ ಮಟ್ಟಿಗೆ ಅವುಗಳ ಸಂರಕ್ಷಣೆಯನ್ನು ಮಾಡಲಾಯಿತು. ಅವರ ದೃಷ್ಟಿಯಲ್ಲಿ ವೇದಗಳ ಅರ್ಥವನ್ನು ಮಾಡುವ ಅಧಿಕಾರ ಯಾರಿಗೂ ಇರಲಿಲ್ಲ. ಅಷ್ಟೇ ಅಲ್ಲ, ಹಾಗೆ ಮಾಡುವುದು ಪಾಪವೆಂದೂ ತಿಳಿಯಲಾಗಿತ್ತು. ಒಂದು ದೃಷ್ಟಿಯಲ್ಲಿ ಇದು ಉಚಿತವೂ ಆಗಿತ್ತು. ಏಕೆಂದರೆ ವೇದಗಳ ಮತ್ತು ಮಂತ್ರಗಳ ಅರ್ಥ ಸುಲಭವಾಗಿ ಆಗುವುದಿಲ್ಲ. ಆದ್ದರಿಂದ ಅವುಗಳನ್ನು ಅರ್ಥೈಸುವವನು ಮೂಲ ಅರ್ಥಕ್ಕಿಂತ ಭಿನ್ನವಾದ ಅರ್ಥವನ್ನು ಮಾಡಬಹುದೆಂಬ ಭಯವಿತ್ತು. ಬಿಭೇತಿ ಅಲ್ಪ ಶೃತಾತ್ ವೇದೋ ಮಾಮಯಂ ಪ್ರಹರಷ್ಯತಿ – ಎಂಬುದಾಗಿ ವೇದಗಳ ಬಗ್ಗೆ ಹೇಳಲಾಗಿದೆ. ಅಂದರೆ ಯಾರು ಅಲ್ಪಶೃತರಾಗಿದ್ದಾರೊ ಮತ್ತು ಅದರ ಅರ್ಥವನ್ನೆ ತಿಳಿಯರೊ ಅಂಥವರನ್ನು ಕಂಡರೆ ವೇದ ಹೆದರುತ್ತದೆ! ಈ ಮನುಷ್ಯ ನನ್ನನ್ನು ಚೂರು ಚೂರು ಮಾಡುತ್ತಾನೆಂದು ವೇದಕ್ಕೆ ಅನಿಸುತ್ತದೆ. ಆದರೂ ಕೂಡ ವೇದವನ್ನು ಒಂದು ಪಕ್ಕಕ್ಕಿರಿಸುವುದು ಒಳ್ಳೆಯದಲ್ಲ.

ವೇದಾಧ್ಯಯನ ಇರುವ ಒಂದೇ ಒಂದು ಉದಾಹರಣೆ ಸಾಯಣಭಾಷ್ಯ. ಅದು ಯಾವ ಅರ್ಥದಲ್ಲಿ? ಮುಸಲ್ಮಾನರ ಆಕ್ರಮಣದಿಂದ ಬಿಡುಗಡೆ ಹೊಂದಿದ ನಂತರ ಹಿಂದೂ ಧರ್ಮದ ಶುದ್ಧಿಗಾಗಿ ವೇದಭಾಷ್ಯದ ಅವಶ್ಯಕತೆ ಉಂಟಾಯಿತು. ವಿಜಯನಗರದ ರಾಜನಾಗಿದ್ದ ಸಾಯಣಾಚಾರ್ಯನಿಗೆ ಭಾಷ್ಯ ಬರೆಯುವ ಆಜ್ಞೆಯನ್ನು ಕೊಡಲಾಯಿತು. ಅಂದರೆ ಬ್ರಹ್ಮವಿದ್ಯೆಯ ಆಧಾರದ ಬದಲಾಗಿ ಸಾಮಾಜಿಕ ಆಧಾರದ ಮೇಲೆ ವೇದವನ್ನು ಒಪ್ಪಿಕೊಳ್ಳಲಾಯಿತು. ಸಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ಭಾಷ್ಯ ಬರಯಲಾಯಿತು. ಇಷ್ಟೆ ಮಾತು! ಆ ಕಾಲದಲ್ಲಿ ಯಜ್ಞ ಪರಂಪರೆ ಪ್ರಚಲಿತವಾಗಿತ್ತು. ಅದನ್ನೆ ಮುಖ್ಯ ಪರಂಪರೆ ಎಂದು ಭಾವಿಸಿ ಕರ್ಮ ಮೀಮಾಂಸಕರು ವೇದವನ್ನು ಅರ್ಥೈಸಿದರು. ಸಾಯಣಾಚಾರ್ಯರು ಯಜ್ಞಿಯ ಪ್ರಕ್ರಿಯೆಯನ್ನು ಮಾನ್ಯಮಾಡಿ ವೇದವನ್ನು ಅರ್ಥೈಸುವ ಪ್ರಯತ್ನಮಾಡಿದರು. ಈ ಪ್ರಯತ್ನವು ನಿಸ್ಸಂಶಯವಾಗಿ ಏಕಾಂಗಿಯಾಗಿತ್ತು. ಏಕೆಂದರೆ ವೇದದ ಅರ್ಥವನ್ನು ಏಕಾಂಗಿಯಾಗಿಯೆ ಮಾಡುವ ಪ್ರಯತ್ನ ಸಾಧ್ಯವಿತ್ತು. ಒಂದು ವೇಳೆ ಬಹು ಅಂಗಿ ಪ್ರಯತ್ನ ನಡೆದಿದ್ದಲ್ಲಿ ಅದು

ಅಪೂರ್ಣವಾಗುತ್ತಿತ್ತು. ಆದ್ದರಿಂದ ನಾವು ಸಾಯಣರಿಗೆ ಆಭಾರಿಗಳಾಗಿದ್ದೇವೆ. ಅವರ ಪ್ರಯತ್ನವು ಏಕಾಂಗಿಯಾಗಿದ್ದರೂ ಅದು ಪ್ರಯತ್ನದಲ್ಲಿ ಪೂರ್ಣವೇ ಆಗಿತ್ತು. ಒಂದು ಪ್ರಕ್ರಿಯೆಯನ್ನು ಕೈಗೆತ್ತಿಕೊಂಡು ವೇದದ ಪೂರ್ಣರೂಪದ ಭಾಷ್ಯವನ್ನು ಸಾಯಣಾಚಾರ್ಯ ಮಾಡಿದುದು ಅವರ ವಿಶೇಷತೆ ಎಂದೇ ಹೇಳಬೇಕು. ಇಂದಿನ ಕಾಲದಲ್ಲಿ ಅನೇಕ ಪದ್ಧತಿಗಳ ಮೂಲಕ ವೇದವನ್ನು ಅರ್ಥೈಸಲಾಗುತ್ತದೆ. ಆದರೆ ಅದು ಪೂರ್ಣವೆಂದೆನಿಸುವುದಿಲ್ಲ. ಇಂದಿನವರೆಗೆ ವೇದದ ಅಧ್ಯಯನ ಮಾಡಿದಂಥವರಿಗೆ ಮತ್ತು ಮುಂದೆ ಮಾಡುವಂಥವರಿಗೆ ಎಲ್ಲರಿಗೂ ಸಾಯಣರ ಭಾಷ್ಯ ನಿಸ್ಸಂಶಯವಾಗಿಯೂ ಉಪಯೋಗಿಯಾಗಿದೆ. ಮತ್ತು ಮುಂದೂ ಉಪಯೋಗಿಯಾಗಿರುವುದು. ಆದ್ದರಿಂದ ವೇದಾಧ್ಯಯನಿಗಳು ಸಾಯಣರ ಉಪಕಾರವನ್ನು ಸ್ಮರಿಸಲೇಬೇಕು. ಮಧ್ಯಕಾಲದಲ್ಲಿಯ ವೇದಾಧ್ಯಯನದ ಬಗ್ಗೆ ಇಷ್ಟು ಮಾತನ್ನು ಮಾತ್ರ ಹೇಳಬಹುದು. ಇನ್ನು ಯಾವುದೂ ವಿಶೇಷ ಇಲ್ಲ. ಒಂದು ಕಾಲದಲ್ಲಿ ವೇದದ ಅಧ್ಯಯನಕ್ಕಿಂತ ಅದರ ಉಚ್ಚಾರಣೆ ಮಾಡಿದರೆ ಸಾಕು ಎಂಬಷ್ಟರ ಮಟ್ಟಿಗೆ ಭಾವಿಸಲಾಗಿತ್ತು. ಅಂದರೆ ರಾಮನಾಮವನ್ನು ಜಪಿಸುವ ರೀತಿಯಲ್ಲಿ. ರಾಮನೆಂದರೆ ನನ್ನ ಆಧಾರ, ಇದಿಷ್ಟು ಭಕ್ತನಿಗೆ ಸಾಕು. ಭಕ್ತರಿಗೆ ಮಂತ್ರದ ಅರ್ಥ ಅಗತ್ಯವಿಲ್ಲ. ವೇದಮಂತ್ರ ಹೇಳಿದರೆ ಸಾಕು ಕೆಲಸವಾದಂತೆ ಎಂದು ಭಾವಿಸಲಾಗುತ್ತಿತ್ತು.

ಇತ್ತೀಚಿಗಿನ ೭೫-೮೦ ವರ್ಷಗಳಲ್ಲಿ ಆಗಿರುವಷ್ಟು ವೇದಾಧ್ಯಯನ ಭಾರತದಲ್ಲಿ ಆ ಮೊದಲು ಅಂದರೆ ಸಾವಿರ - ಒಂದೂವರೆ ಸಾವಿರ ವರ್ಷಗಳವರೆಗೆ ಆಗಿರಲಿಲ್ಲ. ಈ ಕಾಲದಲ್ಲಿ ಪುನಃ ವೇದದ ಉದ್ಧಾರವನ್ನು ಮಾಡಿದ ಶ್ರೇಯಸ್ಸು ಯಾರಿಗಾದರೂ ಸಲ್ಲಬೇಕಿದ್ದರೆ ಅದು ಸ್ವಾಮಿ ದಯಾನಂದ ಸರಸ್ವತಿಯವರಿಗೆ. ಅವರು ವೇದದ ಉದ್ಘೋಷವನ್ನು ಮಾಡಿದರಷ್ಟೆ ಅಲ್ಲ, ತಮ್ಮ ತತ್ವಜ್ಞಾನ ಕೂಡ ವೇದ ಮೂಲಕವೇ ಎಂದು ಹೇಳಿದರು. ಕೇವಲ ಜೀವನಾಧಾರಕ್ಕೆ ಅಷ್ಟೆ ಅಲ್ಲ ತತ್ವಜ್ಞಾನಕ್ಕೂ ವೇದವೇ ಆಧಾರ. ಅದರ ತುಸು ಅಂಶ ಉಪನಿಷತ್ತುಗಳಲ್ಲೂ ಕೂಡ ಬರುತ್ತದೆ. ಪೂರ್ಣಾರ್ಥದಲ್ಲಿ ನೋಡಬೇಕೆಂದರೆ ವೇದವನ್ನೇ ನೋಡಬೇಕೆಂದು ದಯಾನಂದರು ಹೇಳಿದರಲ್ಲದೆ ವೇದಕ್ಕೆ ಸ್ವತಂತ್ರ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರು. ಇದೊಂದು ದೊಡ್ಡ ಕಾರ್ಯವೇ ಸರಿ.

ಈ ಸಂದರ್ಭದಲ್ಲಿ ಎರಡನೆಯ ಹೆಸರು ಅರವಿಂದರರದು. ಅವರು ವೇದದ ಅರ್ಥವನ್ನು ತೆರೆಯಲು ಪ್ರಯತ್ನಿಸಿದರು. ಅದು ಪ್ರಯತ್ನವಷ್ಟೆ. ಏಕೆಂದರೆ ವೇದವು “ಛಂದಸ್.” ಅಂದರೆ ಆಚ್ಛಾದಿತ, ಮುಚ್ಚಿದಂಥದು. ಈ ಮುಸುಕಿನಿಂದ ವಿಷಯವನ್ನು ಹೊರಗೆ ತರುವುದು ಪ್ರಯತ್ನದ ಮಾತಾಗಿದೆ. ಇಂಥ ಪ್ರಯತ್ನವನ್ನು ಅರವಿಂದರು ಮಾಡಿದರು.

ವೇದಾಧ್ಯಯನಕ್ಕೆ ಪ್ರೋತ್ಸಾಹಿಸುವವರಲ್ಲಿ ಮಹರ್ಷಿ ದಯಾನಂದ, ಮಹಾಯೋಗಿ ಶ್ರೀ ಅರವಿಂದರ ನಂತರ ವೇದಮೂರ್ತಿ ಪಂಡಿತ ಸಾತ್ವಲೇಕರ್‌ರ ಹೆಸರು ಬರುತ್ತದೆ. ವೇದಾಧ್ಯಯನವನ್ನು ಬಹು ಏಕಾಗ್ರತೆಯಿಂದಲೂ ಮತ್ತು ಶ್ರದ್ಧೆಯಿಂದಲೂ ಮಾಡಿದಂಥ ಭಾರತೀಯ ವಿದ್ವಾಂಸರದು ದೊಡ್ಡ ಉಪಕಾರವೆ ಇದೆ. ಜರ್ಮನಿಯಲ್ಲಿ ಗ್ರಾಸ್‌ಮೈನ್‌ನು ಋಗ್ವೇದದ ಬಹಳ ಸುಂದರವಾದ ಕೋಶವನ್ನು ತಯಾರಿಸಿದ್ದಾನೆ. ಅದರಲ್ಲಿ ಪ್ರತಿಯೊಂದು ಶಬ್ದದ ಎಲ್ಲ ಅರ್ಥಗಳನ್ನು ತಿಳಿಸುವ ಪೂರಾ ಪ್ರಯತ್ನವಾಗಿದೆ. ಗೆಲಾನಾರ್ ಎಂಬುವನು ಕೂಡ ವೇದದ ಪೂರ್ಣ ಅನುವಾದವನ್ನು ಮಾಡಿದ್ದಾನೆ. ಆದರೆ ಈ ವಿಷಯದಲ್ಲಿ ಪೂರ್ಣಪ್ರಯತ್ನ ನಡೆದಿದ್ದರೂ ಕೂಡ ಅದು ಏಕಾಂಗಿಯೆ ಆಗಿದೆ. ಭಾರತದಲ್ಲಿ ಇನ್ನೂ ವೇದ ಮುದ್ರಣಗೊಂಡಿರದೆ ಇದ್ದ ಕಾಲದಲ್ಲಿ ಮ್ಯಾಕ್ಸ್‌ಮುಲ್ಲರ್‌ನು ಸಾಯಣಾಚಾರ್ಯರ ಭಾಷ್ಯದೊಂದಿಗೆ ವೇದದ ಒಳ್ಳೆಯ ಸಂಪುಟವನ್ನು ಪ್ರಕಟಿಸಿದ. ಮ್ಯಾಕ್ಸ್‌ಮುಲ್ಲರನು ತನ್ನ ಆಯುಷ್ಯದ ನಲವತ್ತು ವರ್ಷಗಳನ್ನು ಋಗ್ವೇದದ ಅಧ್ಯಯನದಲ್ಲಿಯೆ ಕಳೆದ. ಅವನು ಬ್ರಹ್ಮಚಾರಿ ಆಗಿದ್ದ. ಅವನ ಮರಣಾನಂತರ ಲೋಕಮಾನ್ಯ ತಿಲಕರು ಒಂದು ಲೇಖನವನ್ನು ಬರೆದು ಅದರಲ್ಲಿ ತಮ್ಮ ಅಭಿಪ್ರಾಯವನ್ನು ಹೀಗೆ ಪ್ರಕಟಿಸಿದ್ದಾರೆ, "ಮ್ಯಾಕ್ಸ್‌ಮುಲ್ಲರ್ ಬ್ರಹ್ಮಚಾರಿಯಾಗಿದ್ದುದರಿಂದಲೆ ಋಗ್ವೇದದ ಅಧ್ಯಯನ ಮಾಡಲು ಸಾಧ್ಯವಾಯಿತು. ನಮ್ಮಲ್ಲಿ ಬ್ರಹ್ಮಚರ್ಯದ ಕೊರತೆಯಿದೆ. ಆದ್ದರಿಂದ ನಾವು ವೇದಾಧ್ಯಯನವನ್ನು ಮಾಡಲು ಅಸಮರ್ಥರಾಗಿದ್ದೇವೆ. ಕಡಿಮೆಯೆಂದರೆ ನಮ್ಮ ಜೀವಿತದ ನಲವತ್ತು ವರ್ಷಗಳ ನಂತರವಾದರೂ ಬ್ರಹ್ಮಚರ್ಯದ ಪಾಲನೆಯನ್ನು ಅತ್ಯವಶ್ಯವಾಗಿ ಮಾಡಬೇಕು. ಹಾಗಿಲ್ಲವಾದಲ್ಲಿ ನಮ್ಮ ಯಾವ ತತ್ವಜ್ಞಾನವೂ ಉಳಯಲಿಕ್ಕಿಲ್ಲ."

ವಿನೋಬಾರ ಸಮಯವು ಕೂಡ ವೇದಾಧ್ಯಯನದಲ್ಲಿ ಬಹಳಷ್ಟು ಗತಿಸಿದೆ. ವೇದಾರ್ಥವನ್ನು ತಿಳಿಯಲು ಪ್ರಯತ್ನವನ್ನಷ್ಟೆ ಮಾಡಲು ಸಾಧ್ಯ. ಮಹಾರಾಷ್ಟ್ರದಲ್ಲಿ ಶಂಕರ್ ಪಾಂಡುರಂಗ ಪಂಡಿತ್ ಎಂಬ ಹೆಸರಿನ ಓರ್ವ ಪ್ರಖಾಂಡ ಪಂಡಿತರಿದ್ದರು. ಅವರು ವೇದವನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಿದರು. ಅವರು 'ವೇದಾರ್ಥಯತ್ನ' ಎಂಬ ಹೆಸರಿನ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ವೇದಾರ್ಥಯತ್ನ ಇದು ನಮ್ರವಾದ ಹೆಸರು. ನಾವೆಲ್ಲರೂ ಪ್ರಯತ್ನ ಮಾಡಬಹುದು. ಅದಕ್ಕಿಂತ ಹೆಚ್ಚಿಗೆ ಇಲ್ಲ. ಆ ಪ್ರಯತ್ನದಲ್ಲಿ ನಮಗೆ ಬೇಕಾದುದನ್ನು ನಾವು ತೆಗೆದುಕೊಳ್ಳಬಹುದು.

ಈಗ ವಿದ್ಯಾಲಯಗಳಲ್ಲಿ ಮತ್ತು ಇನ್ನಿತರ ಸ್ಥಳಗಳಲ್ಲಿ ವೇದದ ಅಧ್ಯಯನ ಬಹಳಷ್ಟು ನಡೆಯುತ್ತಿದೆ. ಹಿಂದಿನ ಕಾಲಕ್ಕಿಂತಲೂ ಹೆಚ್ಚು ವೇದಾಧ್ಯಯನ ನಡೆಯುತ್ತಿದೆ, ಆ ಬಗ್ಗೆ ನನಗೆ ಬಹು ಸಂತೋಷವೆನಿಸುತ್ತದೆ ಆದರೆ ಅಧ್ಯಯನದ

ಜೊತೆ ಜೊತೆಯಲ್ಲಿ ಅದಕ್ಕನುಸಾರವಾದ ಆಚರಣೆ ಕೂಡ ಇರಬೇಕು. ಆಚಾರ **ಹೀನಂ ನ ಪುನಂತಿ ವೇದಾಃ** – ಅಂದರೆ ಯಾವನು ಆಚಾರ ಹೀನನಾಗಿದ್ದಾನೊ ಅವನನ್ನು ವೇದಗಳು ಪಾವನಗೊಳಿಸಲಾರವು ಅಂದರೆ ವೇದಗಳು ವಿಶಿಷ್ಟವಾಗಿ ಪವಿತ್ರವಾಗಿವೆ. ವಿಶಿಷ್ಟವಾದ ದೀಕ್ಷೆಯನ್ನು ಪಡೆದವರು ವೇದಗಳಿಂದ ಪಾವಿತ್ರತೆಯ ಲಾಭವನ್ನು ಪಡೆಯಬಲ್ಲರು. ಯಾವುದೇ ಸಿದ್ಧತೆಯಿಲ್ಲದಂಥವರಿಗೆ ವೇದ ಪರಮಾತ್ಮನಿಂದ ಪಾವಿತ್ರತೆ ದೊರೆಯಲಾರದು.

ವೈದಿಕ ಸಂಹಿತೆಗಳ ರಕ್ಷಣೆಗಾಗಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸತತ ಪ್ರಯತ್ನ ನಡೆಯುತ್ತಿದೆ. ಇದರ ಪರಿಣಾಮ ಸ್ವರೂಪವಾಗಿ ಇಂದು ವೇದದಲ್ಲಿ ಎಲ್ಲಿಯೂ ಪಾಠ ಭೇದ ಸಿಕ್ಕುವುದಿಲ್ಲ. ಅದೇ ತುಳಸೀ ರಾಮಾಯಣದಂಥ ಅರ್ವಾಚಿನ ಗ್ರಂಥದಲ್ಲಿ ಕೂಡ ಹಲವಾರು ಪಾಠ ಭೇದ ದೊರೆಯುತ್ತದೆ. ಇಷ್ಟೊಂದು ಕಷ್ಟದಿಂದ ಸಂರಕ್ಷಿತಗೊಂಡಿರುವ ಸ್ವರಯುಕ್ತ ಪಠಣವನ್ನು ನಾವು ಕಳೆದುಕೊಳ್ಳಬಾರದು. ವೇದಗಳ ರಕ್ಷಣೆಯ ಸಂಬಂಧವಾಗಿ ಓರ್ವ ವೈದಿಕ ವಿದ್ವಾಂಸರೊಂದಿಗೆ ನನ್ನ ಚರ್ಚೆ ಕೂಡ ನಡೆಯಿತು. ಅವರ ಹೇಳಿಕೆಯ ಪ್ರಕಾರ ಇಡೀ ಭಾರತದಲ್ಲಿ ಇಂದು ಕೇವಲ ೧೫೦೦ ವೈದಿಕರು ಉಳಿದಿರಬಹುದು. ಅವರು ಮಾತ್ರ ವೇದಗಳನ್ನು ಕಂಠಪಾಠ ಮಾಡಿದ್ದಾರೆ. ಉತ್ತರೋತ್ತರವಾಗಿ ಈ ವಿದ್ಯೆ ನಷ್ಟವಾಗುತ್ತಿದೆ. ಬಹುಶಃ ಇನ್ನು ಕೆಲವೇ ವರ್ಷಗಳಲ್ಲಿ ಸ್ವರಯುಕ್ತ ವೇದ ಪಠಣ ಮಾಡುವಂಥವರು ಸಿಗುವುದು ಕಷ್ಟಸಾಧ್ಯವಾಗಬಹುದು. ಈ ಬಗ್ಗೆ ನಾವು ಚಿಂತಿಸುವುದು ನಮ್ಮ ಕರ್ತವ್ಯವಾಗಿದೆ. ನಾನು ಹೇಳಿರುವಂತೆ ಇಂದಿನ ಕಾಲದಲ್ಲಿ ಅವುಗಳನ್ನು ಪೂರ್ಣವಾಗಿ ದಾಖಲಿಸುವುದು ಒಂದು ಉಪಾಯ. ವೇದಗಳಲ್ಲಿ ಒಟ್ಟು ಸೇರಿ ೨೦,೦೦೦ ಮಂತ್ರಗಳಿರಬಹುದು. ವೇದಗಳನ್ನು ಹೇಳುವಂಥವನು ಶಾಂತಿ ಪೂರ್ವಕವಾಗಿ ಹೇಳಿದಲ್ಲಿ ನನ್ನ ತಿಳುವಳಿಕೆಯಂತೆ ಒಂದು ಗಂಟೆಯಲ್ಲಿ ೨೦೦ ಮಂತ್ರಗಳನ್ನು ಹೇಳ ಬಹುದು. ಈ ಲೆಕ್ಕದಂತೆ ಅದು ೧೦೦ ಗಂಟೆಗಳ ಅವಧಿಯಲ್ಲಿ ದಾಖಲಾಗುವುದು. ಇದನ್ನು ಮಾಡುವುದು ಒಂದು ಕರ್ತವ್ಯವೆಂದು ತಿಳಿಯುತ್ತೇನೆ.

(ಸಶೇಷ)

ಅನು– ಸುಕೌ

* * *

ಹೊಸ ಭಾರತದ ಹೊಸ ನಾಯಕ ಜಯಪ್ರಕಾಶ್

-ಸುರೇಂದ್ರ ಕೌಲಗಿ

(ಜಯಪ್ರಕಾಶ್ ನಾರಾಯಣರು ೧೯೦೨ ಅಕ್ಟೋಬರ್ ೧೧ ರಂದು ಜನಿಸಿದರು. ಈಗ ಅವರ ೧೦೪ ನೇ ಜನ್ಮವರ್ಷ. ಅವರ ಪ್ರಾತಃಸ್ಮರಣೀಯ ವ್ಯಕ್ತಿತ್ವದ ಸ್ಮರಣೆಗಾಗಿ ಈ ಲೇಖನ - ಸಂ.)

ದೀರ್ಘಂ ಪಶ್ಯತು ಮಾ ಹ್ರಸ್ವಂ

(ದೀರ್ಘವನ್ನು ನೋಡು, ಹ್ರಸ್ವವನ್ನು ನೋಡಬೇಡ. ಅಂದರೆ ಬಹುಕಾಲ ಉಳಿಯುವಂಥದು ಯಾವುದು ಎಂದು ನೋಡು, ಅಲ್ಪ ಕಾಲ ಉಳಿಯುವುದು ಯಾವುದೋ ಅದನ್ನು ಬಿಡು.)

ಭಾರತ ಬಹು ಪುರಾತನ ದೇಶವಾದರೂ ತನ್ನ ಸನಾತನ ಜ್ಞಾನದಿಂದಾಗಿ ಯಾವಾಗಲೂ ಹೊಸ ದೇಶವಾಗಿಯೇ ಉಳಿಯುತ್ತದೆ. ಅಂತೆಯೇ ಆ ದೇಶದ ನಾಯಕರ ಶ್ರೇಣಿಯಲ್ಲಿ ಬಹು ಇತ್ತೀಚಿನ ನಾಯಕರಾಗಿದ್ದ ಜಯಪ್ರಕಾಶ್ ನಾರಾಯಣರು ಕೂಡ ತಮ್ಮ ಸಂಪೂರ್ಣಕ್ರಾಂತಿ ದರ್ಶನದ ಮೂಲಕ ಎಂದಿಗೂ ಹೊಸ ನಾಯಕರಾಗಿಯೇ ಉಳಿಯುತ್ತಾರೆ. ಆದ್ದರಿಂದ ಅವರನ್ನು ಹೊಸ ಭಾರತದ ಹೊಸ ನಾಯಕ ಎಂದು ಕರೆದರೆ ಅದು ಸತ್ಯದ ಮರುಚ್ಚಾರಣೆ ! ಜಯಪ್ರಕಾಶ್ ತಮ್ಮ ಜೀವಿತದ ಕೊನೆಯವರೆಗೂ ಭಾರತದ ಮಣ್ಣಿನ ಮಗನೇ ಆಗಿದ್ದರು. ಆ ರೀತಿ ಮಣ್ಣಿನ ಮಗನಾಗಲು ಅವರು ಕ್ರಮಿಸಿದ ದಾರಿ ದೀರ್ಘವಾದುದೂ, ವಕ್ರ ವಕ್ರವಾದುದೂ ಆಗಿತ್ತು. ಮುಂದೆ ಅವರು ದೇಶದ ಮಣ್ಣಿನ ಸಂಸ್ಕೃತಿ ಉಳಿಸಿಕೊಳ್ಳಲು ಮಾಡಿದ ಹೋರಾಟವೂ ಅಷ್ಟೇ ದೀರ್ಘವೂ, ಹೃದಯವಿದ್ರಾವಕವೂ ಆಗಿತ್ತು. ಭಾರತ ನಿರ್ಮಾಣ ವೇದಿಕೆಯ ಮೇಲೆ ಗಾಂಧೀಜಿ ಕಾಣಿಸಿಕೊಂಡದ್ದು ೧೯೧೫ರಲ್ಲಿ ಅಹಮದಾಬಾದ್‌ನಲ್ಲಿ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸುವುದರ ಮೂಲಕ. ಮುಂದೆ ಅಲ್ಲಿಂದ ಗಾಂಧೀಯವರ ರಾಷ್ಟ್ರ ನಿರ್ಮಾಣದ ಕೆಲಸ ೧೯೪೮ ಜನೆವರಿ ಮೂವತ್ತರಂದು ಗುಂಡಿಗೆ ಆಹುತಿಯಾಗುವವರೆಗೆ ಅಖಂಡವಾಗಿ ಮೂವತ್ತು ಮೂರು ವರ್ಷಗಳವರೆಗೆ ನಡೆಯಿತು. ಗಾಂಧೀಯವರ ಈ ಅದ್ವಿತೀಯ ಸ್ವರೂಪದ ಸಮಾಜಸೇವೆಯ ಕಾರಣದಿಂದ ಜಗತ್ತಿನ ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನ್ 'ಮಾಂಸ ಮೂಳೆಯ ಇಂಥ ವ್ಯಕ್ತಿಯೊಬ್ಬ ಈ ಭೂಮಿಯ ಮೇಲೆ ಓಡಾಡಿದ್ದ ಎಂದು

ಮುಂದಿನ ಪೀಳಿಗೆ ನಂಬುವುದಿಲ್ಲ' ಎಂಬ ಉದ್ಗಾರ ತೆಗೆಯುವಂತಾಯಿತು. ದೇಶಕ್ಕೆ ಇನ್ನು ಮಾರ್ಗದರ್ಶಕರಾರು ಎಂಬ ಯೋಚನೆಯಲ್ಲಿರುವಾಗ ೧೯೪೮ ಫೆಬ್ರವರಿ ಮಾಹೆಯಲ್ಲಿ ಸಂತ ವಿನೋಬಾ ಭಾವೆಯವರು ಭಾರತ ನಿರ್ಮಾಣ ವೇದಿಕೆಯ ಮೇಲೆ ಕಾಣಿಸಿಕೊಂಡರು ಮತ್ತು ಗಾಂಧೀಜಿಯವರ ಕನಸಾದ ಸರ್ವೋದಯ ಸಮಾಜ ರಚನೆಯ ಮೊದಲ ಹೆಜ್ಜೆಯಾಗಿ ೧೯೫೧ರಲ್ಲಿ ಆಂಧ್ರದ ಪೋಚಂಪಲ್ಲಿಯಲ್ಲಿ ಭೂದಾನ ಯಜ್ಞ ಆಂದೋಲನವನ್ನು ಪ್ರಾರಂಭಿಸಿದರು. ಬ್ರಹ್ಮಚಾರಿಯೂ, ಐವತ್ತು ವರ್ಷಗಳಷ್ಟು ದೀರ್ಘಕಾಲ ವೇದಾಧ್ಯಯನ ಮಾಡಿದಂಥವರೂ ೧೯೩೦ರಲ್ಲಿ ಗಾಂಧೀಜಿಯವರು ನಡೆಸಿದ ಏಕವ್ಯಕ್ತಿ ಸತ್ಯಾಗ್ರಹದಲ್ಲಿ ಮೊದಲ ಸತ್ಯಾಗ್ರಹಿಯಾಗಿ ಸತ್ಯಾಗ್ರಹ ಶಾಸ್ತ್ರಕ್ಕೆ ಭಾಷ್ಯ ಬರೆದಂಥವರೂ ಹಾಗೂ ೧೯೩೨ರಲ್ಲಿ ಮಹಾರಾಷ್ಟ್ರದ ಧುಲಿಯಾ ಕಾರಾಗೃಹದಲ್ಲಿ ಗೀತಾಪ್ರವಚನ ಮಾಡಿದಂಥವರೂ, ಆಗಿದ್ದ ವಿನೋಬಾರವರು ಶ್ರೀರಾಮಚಂದ್ರನ ವನವಾಸಾವಧಿಯ ಎರಡರಷ್ಟು ಕಾಲ ಭಾರತದಾದ್ಯಂತ ಪಾದಯಾತ್ರೆ ಪ್ರಾರಂಭಿಸಿದರು. ಅವರ ಈ ಪಾದಯಾತ್ರೆ ಅವರನ್ನು ಕನ್ಯಾಕುಮಾರಿಯ ಭಾರತ ಮುಖಜ ಭೂಮಿಯಿಂದ, ಭಗೀರಥನ ತಪಸ್ಸಿನ ಭೂಮಿಯಾಗಿದ್ದ ಹಿಮಾಲಯದ ವರೆಗೆ ಕರೆದುಕೊಂಡು ಹೋಯಿತು. ಅಷ್ಟೇ ಅಲ್ಲ, ಪಶ್ಚಿಮದಲ್ಲಿಯ ಅರಬ್ಬೀ ಸಮುದ್ರದಿಂದ ಪೂರ್ವದಲ್ಲಿಯ ಬಂಗಾಲ ಆಖಾತದವರೆಗೂ ಕರೆದುಕೊಂಡು ಹೋಯಿತು. ಮಧ್ಯಪ್ರದೇಶ ರಾಜ್ಯದಲ್ಲಿ ಅಗಾಧವಾಗಿ ಹರಿಯುವ ಚಂಬಲ್ ನದಿಯ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ಸಮಾಜಕಂಟಕರಾಗಿದ್ದ ನೂರಾರು ಡಕಾಯಿತರು ವಿನೋಬಾರವರಿಗೆ ಶರಣಾಗತರಾದರು; ನಂತರ ಇನ್ನು ಕೆಲವರು ಜಯಪ್ರಕಾಶರಿಗೆ ಶರಣಾಗತರಾದರು. ಡಕಾಯಿತರ ಕಾಟದಿಂದ ದೇಶ ಶಾಶ್ವತವಾಗಿ ಮುಕ್ತವಾಯಿತು. ತಮ್ಮ ಮೂವತ್ತು ವರ್ಷಗಳಿಗೂ ಹೆಚ್ಚಿನ ಅವಧಿಯ ಭೂದಾನಯಜ್ಞ ಪಾದಯಾತ್ರೆಯ ಮೂಲಕ ಸುಮಾರು ೪೫೦೦೦ ಎಕರೆ ಭೂಮಿಯನ್ನು ಭೂ ಮಾಲೀಕರ ಹೃದಯ ಮತ್ತು ಮನಸ್ಸುಗಳ ಪರಿವರ್ತನೆಯ ಮೂಲಕ ಪಡೆದ ನಂತರ ಭೂಮಿ ಹೀನರಿಗೆ ಹಂಚಿ ಯಾವುದೇ ದೇಶದ ಯಾವುದೇ ಸರ್ಕಾರ ಮಾಡದೇ ಇದ್ದ ಅಭೂತಪೂರ್ವವಾದ ಭೂ ಸುಧಾರಣೆಯ ಕೆಲಸವನ್ನು ಅಹಿಂಸಾತ್ಮಕವಾಗಿ ಮಾಡಿ ತೋರಿಸಿದರು ವಿನೋಬಾ. ಕರ್ಮಭೂಮಿಯೂ ಧರ್ಮಭೂಮಿಯೂ ಆದ ಭರತಖಂಡದಲ್ಲಿ ಬುದ್ಧನ ಧರ್ಮಚಕ್ರವು ಪುನಃ ಉರುಳುವಂತೆ ಮಾಡಿದರು. ಸಮಾಜವಾದಿಗಳೂ, ಸಾಮ್ಯವಾದಿಗಳೂ ನೆರವೇರಿಸದೇ ಇದ್ದಂಥ ಕೆಲಸವನ್ನು ವಿನೋಬಾ ನೆರವೇರಿಸಿದರು. ಇಡೀ ತಮ್ಮ ಆಯುಷ್ಯವನ್ನೇ

ಅಂತ್ಯೋದಯದ ಮೂಲಕ ಸರ್ವಸಮಾನರ ಸಮಾಜ ರಚನೆಗಾಗಿ ೨೮ ವರ್ಷಗಳ ಕಾಲ ಸಮರ್ಪಿಸಿಕೊಂಡು ತಮ್ಮ ೮೫ನೇ ವಯಸ್ಸಿನಲ್ಲಿ ಪಂಚಭೂತಗಳಲ್ಲಿ ಲೀನವಾದರು.

ಭಾರತ ನಿರ್ಮಾಣ ವೇದಿಕೆಯ ಮೇಲೆ ವಿನೋಬಾರವರು ಇನ್ನೂ ಕ್ರಿಯಾಶೀಲವಾಗಿರುವಾಗ ಭಾರತದ ಸಮಾಜವಾದಿ ಆಂದೋಲನದ ಪ್ರಮುಖ ಪ್ರವರ್ತಕರಾದ ಜಯಪ್ರಕಾಶ ನಾರಾಯಣರು ವಿನೋಬಾ ಭಾವೆಯವರ ಭೂದಾನ ಯಜ್ಞ ಆಂದೋಲನದಲ್ಲಿ ತಮ್ಮ ಹೃದಯಕ್ಕೆ ಅತ್ಯಂತ ಪ್ರಿಯವಾದ ಸಮಾಜವಾದವು ಕ್ರಿಯಾಶೀಲತೆಯ ರೂಪ ಧರಿಸುತ್ತಿರುವುದನ್ನು ಕಂಡರು. ೧೯೨೨ ರಿಂದ ೧೯೨೯ರ ವರೆಗೆ ಏಳು ವರ್ಷಗಳ ಕಾಲ ಝಗಝಗಿಸುವ ಬಂಡವಾಳಶಾಹಿ ದೇಶವಾಗಿದ್ದ ಅಮೇರಿಕಾದಲ್ಲಿದ್ದರೂ ಸಹ ಆ ಜೀವನ ಪದ್ಧತಿಯಿಂದ ಅವರು ಎಳ್ಳಷ್ಟೂ ಪ್ರಭಾವಿತರಾಗಲಿಲ್ಲ. ಒಂದು ವೇಳೆ ಪ್ರಭಾವಿತರಾಗಿದ್ದಿದ್ದರೆ ಆ ಬಗ್ಗೆ ಯಾರೂ ಆಶ್ಚರ್ಯಪಡುವಂತಿರಲಿಲ್ಲ. ಏಕೆಂದರೆ ಜಯಪ್ರಕಾಶರು ಬಿಹಾರದಂಥ ಹಿಂದುಳಿದ ರಾಜ್ಯದ ಹಿಂದುಳಿದ ಒಂದು ಹಳ್ಳಿಯಿಂದ ಬಂದಂಥವರಾಗಿದ್ದರು. ಅಮೇರಿಕಾದಲ್ಲಿ ವಿದ್ಯಾಭ್ಯಾಸ ಮಾಡುವಾಗ ಬೇಕಾಗಿದ್ದ ಹಣವನ್ನು ಸಂಪಾದಿಸಲು ಹಲವಾರು ಕ್ಷೇತ್ರಗಳಲ್ಲಿ ಕೂಲಿಯಾಗಿ ದುಡಿಯಬೇಕಾಗಿ ಬಂದಿತ್ತು. ಇಂಥ ಪರಿಸ್ಥಿತಿಯಲ್ಲಿರುವ ಯಾವುದೇ ಒಬ್ಬ ಸಾಮಾನ್ಯ ಯುವಕ ಶ್ರೀಮಂತಿಕೆಯ ಕನಸನ್ನು ಕಾಣುವುದು ಸಹಜವಾಗಬಹುದಾಗಿತ್ತು. ಆದರೆ ಜಯಪ್ರಕಾಶರು ಸ್ವಯಂ ಪ್ರತಿಭೆಯುಳ್ಳ ವ್ಯಕ್ತಿ ; ವಿಚಾರಶೀಲ ವ್ಯಕ್ತಿ. ಆದ್ದರಿಂದ ಯಾವ ವಿಷಯವನ್ನೇ ಆಗಲಿ ಅದನ್ನು ಮಾನವೀಯ ಮೌಲ್ಯಗಳ ಒರೆಗಲ್ಲಿನ ಮೇಲೆ ಉಜ್ಜಿಯೇ ಪರೀಕ್ಷಿಸುತ್ತಿದ್ದರು. ಇದು ಅವರ ವಿದ್ಯಾರ್ಥಿ ಜೀವನದಿಂದ ಅಂದರೆ ೧೯೧೨ ರಿಂದ ಅವರ ಜೀವಿತಾಂತ್ಯದವರೆಗೂ ಅಂದರೆ ೧೯೭೯ರ ವರೆಗೂ ಅರವತ್ತೇಳು ವರ್ಷಗಳಷ್ಟು ದೀರ್ಘಕಾಲದ ಹೋರಾಟದುದ್ದಕ್ಕೂ ಉಳಿದುಕೊಂಡು ಬಂದಿದ್ದ ವಿಶೇಷ ಸ್ವಭಾವವಾಗಿತ್ತು. ಆದ್ದರಿಂದಲೇ ಅವರು ಅಮೇರಿಕಾದಲ್ಲಿ ಯುವ ವಿದ್ಯಾರ್ಥಿಯಾಗಿದ್ದಾಗ ಬಂಡವಾಳಶಾಹಿ ಅರ್ಥಿಕ ವ್ಯವಸ್ಥೆಯನ್ನು ಅಧ್ಯಯನ ಮಾಡಿದ್ದರೂ ಅದು ಮಾನವೀಯ ಗುಣಗಳಿಗೆ ದೂರವೆಂದು ತಿಳಿದು ಅದನ್ನು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಸೋವಿಯತ್ ಒಕ್ಕೂಟ ಪ್ರತಿಪಾದಿಸುತ್ತಿದ್ದ ಸಾಮ್ಯವಾದದ ಕಡೆಗೆ ಒಲವು ತೋರಿಸಿದರು. ಮಾರ್ಕ್ಸ್‌ವಾದವನ್ನೂ ಗಂಭೀರವಾಗಿ ಅಧ್ಯಯನ ಮಾಡಿದರು. ಇದರೊಂದಿಗೆ ಎಮ್. ಎನ್. ಮೋಹನರಾಯ್‌ರ ತೀಕ್ಷ್ಣ ಲೇಖನಗಳನ್ನೂ ಓದಿದರು. ಆದರೆ ಈ ವೈಚಾರಿಕ ಸಾಹಿತ್ಯ ಜಯಪ್ರಕಾಶರ

ಸ್ವಯಂ ವಿಚಾರ ಪ್ರತಿಭೆಯ ಒರೆಗಲ್ಲಿನ ಮೇಲೆ ಅಪರಿಶುದ್ಧವೆಂದೇ ಸಿದ್ಧವಾಯಿತು. ಜಯಪ್ರಕಾಶರಿಗೆ ಅತ್ಯಂತ ಪ್ರಿಯವಾದ ವಸ್ತು ಸ್ವಾತಂತ್ರ್ಯ. ಮಾನವನ ಪರಿಪೂರ್ಣ ವಿಕಾಸಕ್ಕೆ ಸ್ವಾತಂತ್ರ್ಯ ಅತ್ಯಗತ್ಯವೆಂದು ಬಲವಾಗಿ ಭಾವಿಸಿದ್ದ ಜಯಪ್ರಕಾಶರು ಸಾಮ್ಯವಾದವನ್ನೂ, ಬಂಡವಾಳಶಾಹಿ ವಾದವನ್ನೂ ತ್ಯಜಿಸಿದ್ದು ಅವರ ಸ್ವಭಾವಕ್ಕನುಗುಣವಾದ ತೀರ್ಮಾನವೇ ಆಗಿತ್ತು.

ವಿದ್ಯಾಭ್ಯಾಸ ಮುಗಿಸಿಕೊಂಡು ಭಾರತಕ್ಕೆ ಬಂದಾಗ ಜಯಪ್ರಕಾಶರಿಗೆ ಮೂವತ್ತು ವರ್ಷ. ಯೌವನಕ್ಕೆ ಸಹಜವಾದ ಸಾಹಸಬುದ್ಧಿ ಅವರಲ್ಲಿ ಕೆಲಸಮಾಡಹತ್ತಿತು. ಸ್ವದೇಶದಲ್ಲಿಯೂ ಅವರ ಸ್ವಯಂ ಪ್ರಭೆ ಕೆಲಸಮಾಡಹತ್ತಿತು. ಆಗ ಅವರ ಮುಂದೆ ಇದ್ದ ವಿಚಾರಗಳು ಎರಡು. ಒಂದು ಸಾಮ್ಯವಾದದ ವಿಚಾರ ; ಇನ್ನೊಂದು ಗಾಂಧೀಜಿಯವರ ಸತ್ಯಾಗ್ರಹ ವಿಚಾರ. ಈ ಎರಡು ವಿಚಾರಗಳಲ್ಲಿ ಒಂದನ್ನು ಆಯ್ಕೆಮಾಡಿ ಆ ವಿಚಾರದ ಬೆಳಕಿನಲ್ಲಿ ರಾಷ್ಟ್ರ ನಿರ್ಮಾಣದ ಕೆಲಸವನ್ನು ಆಜೀವ ಪರ್ಯಂತ ಮಾಡಬೇಕಿತ್ತು. ಈ ಎರಡು ತೀರ ಭಿನ್ನವಾದ ವಿಚಾರಗಳಲ್ಲಿಯ ಆಯ್ಕೆ ಅಷ್ಟು ಸುಲಭವಾದುದಾಗಿರಲಿಲ್ಲ. ಆದರೆ ಹಂಸಕ್ಷೀರ ನ್ಯಾಯದಂತೆ ಜಯಪ್ರಕಾಶರು ತಾತ್ಕಾಲಿಕ ಸಫಲತೆಯತ್ತ ಒಯ್ಯುವ ಸಾಮ್ಯವಾದವನ್ನು ಬಿಟ್ಟು, ಜೀವನವನ್ನು ಸಾರ್ಥಕಗೊಳಿಸಬಹುದಾದ ಸತ್ಯಾಗ್ರಹ ಸಿದ್ಧಾಂತವನ್ನು ಅಂಗೀಕರಿಸಿದರು. ಈ ತೀರ್ಮಾನವನ್ನು ಅವರು ೧೯೩೦ರಲ್ಲಿ ಅಂಗೀಕರಿಸಿದುದು ಗಗನದಲ್ಲಿ ಸಹಜವಾಗಿ ಹಾರುವ ಪಕ್ಷಿಯ ಸಹಜ ಸ್ವಭಾವದಂತಿತ್ತು. ಮುಂದೆ ಸ್ವಾತಂತ್ರ್ಯದ ಹೋರಾಟದ ಸಂದರ್ಭದಲ್ಲಿ ಎಂಥ ದೈಹಿಕ-ಮಾನಸಿಕ ನೋವನ್ನೇ ಅನುಭವಿಸಬೇಕಾಗಿ ಬಂದರೂ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದೆಗೆದುಕೊಳ್ಳದ ವೀರ ಯೋಧನಂತೆ ಜಯಪ್ರಕಾಶರು ಮುಂದೆಂದಿಗೂ ಸತ್ಯಾಗ್ರಹದ ಮಾರ್ಗಕ್ಕೆ ವಿಮುಖರಾಗಿ ವರ್ತಿಸಲಿಲ್ಲ.

ಗಾಂಧೀ ಪ್ರಾರಂಭಿಸಿದ್ದ ಸತ್ಯಾಗ್ರಹ ಆಧಾರಿತ ಸ್ವಾತಂತ್ರ್ಯ ಹೋರಾಟದ ಸಫಲತೆಯಲ್ಲಿ ಮೊದಲು ಜಯಪ್ರಕಾಶರು ಅಪನಂಬಿಕೆ ಹೊಂದಿದ್ದರೂ ಕಾಲಕ್ರಮೇಣ ಆ ಹೋರಾಟದಲ್ಲಿ ಅವರಿಗೆ ಹೆಚ್ಚಿನ ವಿಶ್ವಾಸ ಮತ್ತು ಬದ್ಧತೆ ಮೂಡುತ್ತಾಬಂದವು. ಸ್ವಾತಂತ್ರ್ಯ ಹೋರಾಟದ ವಿಷಯದಲ್ಲಿ ಸಾಮ್ಯವಾದಿಗಳು ತೋರಿಸಿದ ಗಡಿಯಾಚೆಗಿನ ನಿಷ್ಠೆಯಿಂದ ಉದ್ವಿಗ್ನಗೊಂಡ ಜಯಪ್ರಕಾಶರು ಗಾಂಧೀ ವಿಚಾರದತ್ತ ಹೆಚ್ಚು ಹೆಚ್ಚು ವಾಲಲು ಪ್ರಮುಖ ಕಾರಣವಾಯಿತು. ಗಾಂಧೀಜಿಯವರು ಹೂಡಿದ್ದ ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ, ಅಸ್ಪೃಶ್ಯತಾ ನಿವಾರಣೆಯ ಪ್ರಯತ್ನ ಹಾಗೂ ಕೋಮು ಸೌಹಾರ್ದತೆಯ ವಿಚಾರ, ಗ್ರಾಮಗಳ ಪುನರುತ್ಥಾನದ ಅಗತ್ಯತೆಗೆ

ಒತ್ತಾಯ ಇತ್ಯಾದಿಗಳೆಲ್ಲವೂ ಜಯಪ್ರಕಾಶರ ಮನದಾಳದಲ್ಲಿದ್ದ ಸಮಾಜವಾದಿ ಭಾವನೆಯನ್ನು ಹೊರಹೊಮ್ಮಿಸಿದವು. ಅದಕ್ಕಾಗಿ ಅವರು ಸಾಮ್ಯವಾದಿಗಳಿಗೆ ಪತ್ರ ಬರೆದು, "ಪ್ರಾಮಾಣಿಕ ಭಿನ್ನಾಭಿಪ್ರಾಯಗಳಿರುವ ಎರಡು ಪಕ್ಷಗಳಿರಲಿ. ಆದರೆ ಅವು ಪ್ರತ್ಯಕ್ಷ ಕಾರ್ಯದಲ್ಲಿ ಪ್ರಾಮಾಣಿಕವಾಗಿ ಸಹಕರಿಸಲಿ. ಕೇವಲ ಅಂತರ್ಮುಖಿಗಳಾಗಿರದೆ, ಬಹಿರ್ಮುಖಿಗಳಾಗಿಯೂ ಬೆಳೆಯುತ್ತಾ ಜನಸಾಮಾನ್ಯರನ್ನು ತಲುಪಲಿ." ಎಂದು ಮುಂತಾಗಿ ತಿಳಿಸಿದರು.

೧೯೩೯ರ ಸೆಪ್ಟೆಂಬರ್ ತಿಂಗಳಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ಈ ಯುದ್ಧದಲ್ಲಿ ಇಂಗ್ಲಿಷ್ ಸರ್ಕಾರ ಭಾರತೀಯರ ಒಪ್ಪಿಗೆಯಿಲ್ಲದೆಯೆ ಭಾರತವನ್ನು ಎಳೆಯಿತು. ಇಂಗ್ಲೀಷ್‌ರ ಈ ಕ್ರಮವು ಗಾಂಧೀಜಿಯವರಿಗೆ ಒಪ್ಪಿಗೆಯಾಗಲ್ಲಿಲ್ಲ. ಅಂತೆಯೇ ಜಯಪ್ರಕಾಶರಿಗೂ. ಆದರೆ ಇಂಗ್ಲೀಷ್ ಸರ್ಕಾರದ ಈ ಕ್ರಮದ ವಿರುದ್ಧ ಪ್ರತಿಭಟನೆ ಮಾಡುವ ವಿಧಾನ ಮಾತ್ರ ಬೇರೆಬೇರೆಯಾಗಿತ್ತು. ಜಯಪ್ರಕಾಶರಲ್ಲಿ ಇನ್ನೂ ಉಗ್ರಗಾಮಿ ಪ್ರವೃತ್ತಿ ಜಾಗೃತವಾಗಿಯೇ ಇತ್ತು. ಆದ್ದರಿಂದ ೧೯೪೦ರ ಫೆಬ್ರವರಿ ಮಾಹೆಯ ೮ನೇ ತಾರೀಖಿನಂದು ಜಮಶೆಡ್‌ಪುರದಲ್ಲಿ ಅವರನ್ನು ಸರ್ಕಾರ ಬಂಧಿಸಿ ಒಂಭತ್ತು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿತು. ರಾಜಾಸ್ಥಾನದ ದೇವೋಲಿ ಕಾರಾಗೃಹದಲ್ಲಿ ಜಯಪ್ರಕಾಶರು ಇದ್ದಾಗ ಆ ಕಾರಾಗೃಹದಲ್ಲಿದ್ದ ಸುಮಾರು ೧೦೪ ರಾಜಕೀಯ ಕೈದಿಗಳನ್ನು ನಡೆಸಿಕೊಳ್ಳಲಾಗುತ್ತಿದ್ದ ಹೀನ ರೀತಿಯನ್ನು ಖಂಡಿಸಿ ಜಯಪ್ರಕಾಶರು ೩೫ ದಿನಗಳ ಉಪವಾಸ ಮಾಡಿದರು. ಆಗ ಅವರು ೩೮ ವರ್ಷದ ಯುವಕ. ಆ ಸಂದರ್ಭದಲ್ಲಿ ಇಂಗ್ಲಿಷರು ಜಯಪ್ರಕಾಶರ ಮೇಲೆ ಆಪಾದನೆ ಹೊರಿಸಲು ಮಾಡಿದ ಪ್ರಯತ್ನವನ್ನು ಖಂಡಿಸಿ ಜಯಪ್ರಕಾಶರ ಕೃತಿಯನ್ನು ಗಾಂಧೀಜಿ ಸಮರ್ಥಿಸಿದರು. ಉಗ್ರವಾದಿಯಾಗಿದ್ದ ಜಯಪ್ರಕಾಶರು ಉಪವಾಸದಂಥ ಸೌಮ್ಯರೂಪದ ಪ್ರತಿಭಟನಾ ವಿಧಾನವನ್ನು ಅನುಸರಿಸಿದ್ದು ಅವರ ಮುಕ್ತ ವೈಚಾರಿಕತೆಯ ಬದ್ಧತೆಯನ್ನು ತೋರಿಸುತ್ತದೆ. ಮುಂದೆ ಇಂಥದೆ ಸೌಮ್ಯರೂಪದ ಕ್ರಮವನ್ನು ಸರ್ವಾಧಿಕಾರಿಯಾಗಿದ್ದ ಇಂದಿರಾಗಾಂಧಿಯವರ ವಿರುದ್ಧ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ೧೯೭೫ ಜೂನ್ ೨೬ರಿಂದ ನವೆಂಬರ್ ಅಂತ್ಯದವರೆಗೆ ಐದು ತಿಂಗಳು ಏಕಾಂತವಾಸದ ಕಾರಾಗೃಹ ಶಿಕ್ಷೆ ಅನುಭವಿಸುತ್ತಿದ್ದಾಗ ದೈಹಿಕವಾಗಿಯೂ, ಮಾನಸಿಕವಾಗಿಯೂ ಅತ್ಯಂತ ಕೃಷವಾಗಿದ್ದಾಗ ಜಯಪ್ರಕಾಶರು ಆಮರಣಾಂತ ಉಪವಾಸ ಕೈಗೊಂಡಿದ್ದರೆಂಬ ಸಂಗತಿ ಅವರು ಹೊಂದಿದ್ದ ವೈಚಾರಿಕ ದೃಢ ನಿಲುವನ್ನೂ ಮತ್ತು ಕಾರಾಗೃಹದ ಹೊರಗೆ ಇದ್ದ ಸಮಸ್ತ ಭಾರತೀಯ ಜನಕೋಟಿಗೆ

ನಿಜ ಪ್ರಜಾಪ್ರಭುತ್ವದ ಮತ್ತು ಸಮಾನತೆಯ ತತ್ವಗಳ ಪರಿಪಾಲನೆಯ ಅವಶ್ಯಕತೆಯ ಪಾಠವನ್ನೂ ಹೇಳುವಂತಿತ್ತು.

ಗಾಂಧೀ ಮತ್ತು ವಿನೋಬಾ ಈ ಇಬ್ಬರು ನಾಯಕರನ್ನು ಜಯಪ್ರಕಾಶರು ಮಾರ್ಕ್ಸ್ ಮತ್ತು ಲೆನಿನ್‌ರವರ ಬದಲಾಗಿ ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದರು. ನೆಹರೂರವರ ಆಡಳಿತ ಕಾಲದಲ್ಲಿ ಜಾರಿಗೆ ಬಂದ 'ಕಲ್ಯಾಣಕಾರಿ ಸಮಾಜ'ವೆಂಬ ಪದಗುಚ್ಛವನ್ನು ಜಯಪ್ರಕಾಶರು ಒಪ್ಪಲಿಲ್ಲ. ಅದಕ್ಕೆ ಬದಲಾಗಿ ಗಾಂಧೀ ಮತ್ತು ವಿನೋಬಾ ರಚಿಸಿದ್ದ 'ಸರ್ವೋದಯ ಸಮಾಜ' ಪದಗುಚ್ಛ ಹೆಚ್ಚು ಉತ್ತಮವಾದುದ್ದೆಂದು ಹೇಳಿದರು.

ಜಯಪ್ರಕಾಶರು ತಮ್ಮ ಯೌವನಾವಸ್ಥೆಯಿಂದ ವೃದ್ಧಾಪ್ಯದವರೆಗೂ ಕ್ರಾಂತಿಕಾರಿಯಾಗಿಯೇ ಜೀವನ ನಡೆಸಿದರು. ಅವರ ಈ ಕ್ರಾಂತಿಯ ಹಿಂದೆ ಇದ್ದ ಉದ್ದೇಶ್ಯ ಫ್ರೆಂಚ್ ಕ್ರಾಂತಿಯ ಹಿಂದೆ ಇದ್ದ ಉದ್ದೇಶ್ಯಗಳೇ ಆಗಿದ್ದವು. ಅಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ. ಈ ಉದ್ದೇಶ್ಯಗಳಗೆ ಧಕ್ಕೆ ಬಂದಾಗಲೆಲ್ಲಾ ಜಯಪ್ರಕಾಶರಲ್ಲಿಯ ಕ್ರಾಂತಿಕಿಡಿಗಳು ಹೊರಬೀಳುತ್ತಿದ್ದವು. ಆ ಉದ್ದೇಶಗಳ ಸ್ಥಾಪನೆಗಾಗಿ ಎಂಥದೇ ಅಪಾಯವನ್ನು ಎದುರಿಸಲು ಸಿದ್ಧರಾಗುತ್ತಿದ್ದರು. ಅವರ ಕ್ರಾಂತಿಕಾರಿ ಜೀವನವನ್ನು ಮೂರು ಘಟ್ಟಗಳಲ್ಲಿ ಗುರುತಿಸಬಹುದು.

(೧) ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದ್ದು ;

(೨) ೧೯೭೫ ರಲ್ಲಿ ಇಂದಿರಾ ಗಾಂಧೀಯವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಜಾಪ್ರಭುತ್ವವನ್ನೇ ಕಿತ್ತು ಹಾಕಿದ ಸಂದರ್ಭದಲ್ಲಿ ನಡೆಸಿದ ಹೋರಾಟ ಮತ್ತು ಕಾರಾಗೃಹವಾಸ ;

(೩) ವಿನೋಬಾ ನೇತೃತ್ವದಲ್ಲಿ ನಡೆಯುತ್ತಿದ್ದ ಭೂದಾನಯಜ್ಞದಲ್ಲಿ ಭಾಗವಹಿಸಿ, ಆ ಆಂದೋಲನಕ್ಕೆ ತಮ್ಮ ಜೀವನವನ್ನೇ ದಾನವನ್ನಾಗಿಮಾಡಿದ್ದು.

ಇಂದಿರಾಗಾಂಧೀಯವರ ಸರ್ವಾಧಿಕಾರಿ ಧೋರಣೆಯ ವಿರುದ್ಧವಾಗಿ ಜಯಪ್ರಕಾಶರು ನಡೆಸಿದ ಹೋರಾಟದಲ್ಲಿ ಅವರು ವಿದ್ಯಾರ್ಥಿಗಳಿಗೂ, ಯುವಕರಿಗೂ ನಾಯಕತ್ವ ಕೊಟ್ಟದ್ದು ಪ್ರಜಾಪ್ರಭುತ್ವದ ಸುಲಲಿತ ನಿರ್ವಹಣೆಗೆ ನೀಡಿದ ಮಹತ್ವದ ಕಾಣಿಕೆಯಾಗಿದೆ. ಅವರ ಕಾಣಿಕೆಗಳನ್ನು ಈ ರೀತಿ ಪಟ್ಟಿ ಮಾಡಬಹುದು.

(೧) ಪ್ರಮುಖ ನಾಯಕರು ಅಧಿಕಾರದ ಕೇಂದ್ರ ಸ್ಥಾನದಲ್ಲಿರದೆ ಹೊರ ಭಾಗದಲ್ಲಿದ್ದು ಸರ್ಕಾರಕ್ಕೆ ಮಾರ್ಗದರ್ಶನ ಮಾಡಬೇಕು ;

(೨) ನಾಯಕರು ಜನತೆಗೆ ನೈತಿಕವಾಗಿ ಮಾರ್ಗದರ್ಶಕರಾಗಿರಬೇಕು ;

(೩) ಚುನಾವಣೆಗಳಲ್ಲಿ ಸ್ಪರ್ಧಿಸುವ ಉಮೇದುವಾರರನ್ನು ರಾಜಕೀಯ ಪಕ್ಷಗಳು ಗೊತ್ತು ಮಾಡದೆ, ಆಯಾ ಕ್ಷೇತ್ರದ ಮತದಾರರು ತಮ್ಮ ಸಂಘಟನೆಗಳ ಮೂಲಕ ಯೋಗ್ಯ ಉಮೇದುವಾರರನ್ನು ಗೊತ್ತುಮಾಡಬೇಕು ;

(೪) ಭ್ರಷ್ಟನಾಗುವ ಹಾಗೂ ಮತದಾರರ ಅಭಿಪ್ರಾಯದಲ್ಲಿ ಅಯೋಗ್ಯನೆಂದೆನಿಸುವ ಜನತಾ ಪ್ರತಿನಿಧಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಅವಕಾಶ ಮತದಾರರಿಗೆ ಇರಬೇಕು ;

(೫) ರಾಜ್ಯಶಕ್ತಿ, ದಂಡಶಕ್ತಿಗಳ ಮೇಲೆ ನಿಯಂತ್ರಣ ಇಡುವ ಲೋಕಶಕ್ತಿ ತಲೆಯೆತ್ತಬೇಕು ;

(೬) ರಾಜಕೀಯ ಪಕ್ಷಗಳಾಧಾರಿತ ಪ್ರಜಾತಂತ್ರದ ಬದಲಾಗಿ ಲೋಕತಂತ್ರ ಆಧಾರಿತ ಪ್ರಜಾತಂತ್ರ ಸ್ಥಾಪಿತಗೊಳ್ಳಬೇಕು ;

(೭) ಲೋಕಾನುಭವ ಹೆಚ್ಚಿದಂತೆಲ್ಲ ರಾಜಕೀಯ ಪಕ್ಷಗಳ ಮಹತ್ವ ಕಡಿಮೆಯಾಗುತ್ತಾ ಹೋಗಬೇಕು ; ಯಾವರೀತಿ ಸರ್ಕಾರದ ಅಸ್ತಿತ್ವವೆಂಬುದೇ ಇಲ್ಲದಿರುವ ಕಾಲಕ್ಕಾಗಿ ಪ್ರಯತ್ನಿಸಲಾಗುತ್ತದೆಯೋ ಅದೇ ರೀತಿ ರಾಜಕೀಯ ಪಕ್ಷಗಳೇ ಇಲ್ಲದಿರುವ ಪ್ರಜಾತಂತ್ರದ ವ್ಯವಸ್ಥೆಗಾಗಿ ಪ್ರಯತ್ನ ನಡೆಯಬೇಕು

(೮) ಗ್ರಾಮ ಗಣರಾಜ್ಯಗಳ ಸ್ಥಾಪನೆಯಾಗಬೇಕು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ೬೫ ವರ್ಷಗಳಾದವು. ಒಂದು ದೇಶದ ಜೀವನದಲ್ಲಿ ಇದು ದೊಡ್ಡ ಕಾಲವಲ್ಲ. ಭವಿಷ್ಯ ಇನ್ನೂ ದೀರ್ಘವಾಗಿದೆ. ದೇಶದ ಮುಂದಿನ ಭವಿಷ್ಯ ದೇಶದ ಯುವಕರ ಕೈಯಲ್ಲಿದೆಯೆಂದು ಜಯಪ್ರಕಾಶರು ನಂಬಿದ್ದರು. ಅದಕ್ಕಾಗಿ ಅವರು ಯುವಕರ ಮುಂದೆ ಸಂಪೂರ್ಣ ಕ್ರಾಂತಿಯ ಸಿದ್ಧಾಂತವನ್ನೇ ಮುಂದಿಟ್ಟರು. ಸಮಾಜ ಜೀವನದ ಪ್ರತಿಯೊಂದು ವಿಭಾಗದಲ್ಲಿ ಮಾನವೀಯ ಮೌಲ್ಯಗಳ ಆಧಾರದ ಮೇಲೆ ಆಮೂಲಾಗ್ರ ಪರಿವರ್ತನೆಯನ್ನು ಮಾಡುವ ಆಹ್ವಾನವನ್ನು ಜಯಪ್ರಕಾಶರು ಯುವಕರ ಮುಂದೆ ಇಟ್ಟಿದ್ದಾರೆ. ತನ್ಮೂಲಕ ಹೊಸ ಭಾರತ ಕಟ್ಟುವ ಹೊಸ ಮಾರ್ಗವನ್ನು ಅವರು ಸಮಸ್ತ ದೇಶವಾಸಿಗಳ ಮುಂದೆ ಇಟ್ಟಿದ್ದಾರೆ. ಭಾರತ ನಿರ್ಮಾಣ ವೇದಿಕೆ ಮೇಲೆ ಮೊದಲು ಗಾಂಧೀ, ನಂತರ ವಿನೋಬಾ, ನಂತರ ಜಯಪ್ರಕಾಶ್ ಕಾಣಿಸಿಕೊಂಡರು. ತಮ್ಮ ತ್ಯಾಗ ಮತ್ತು ಬಲಿದಾನಗಳಿಂದ ಹಾಗೂ ಎಲ್ಲಾ ಬಗೆಯ ರಾಜಕೀಯ ಸಿದ್ಧಾಂತಗಳ ಅಧ್ಯಯನಗಳಿಂದ ನಿರಂತರ ಪ್ರಸ್ತುತವಾಗುವ ಸಂಪೂರ್ಣಕ್ರಾಂತಿ ಅಥವಾ ಸಮಗ್ರಕ್ರಾಂತಿಯ ದರ್ಶನವನ್ನು ದೇಶದ ಮುಂದೆ ಇಟ್ಟ ಜಯಪ್ರಕಾಶರು ಹೊಸ ಭಾರತದ ಹೊಸ ನಾಯಕರಾಗಿದ್ದಾರೆ.

* * *

ವಸುಧೈವ ಕುಟುಂಬಕಂ

– ಪಿ. ಪರಮೇಶ್ವರನ್

೧೯೬೨ರಷ್ಟು ಹಿಂದೆಯೇ 'ನಾಗರೀಕತೆಯ ವಿಚಾರ' ಎಂಬ ಪುಸ್ತಕವೊಂದು ಪ್ರಕಟಗೊಂಡಿತು ಅದನ್ನು ಯುನೆಸ್ಕೋದ ಸಹಕಾರದಿಂದ ಪ್ರಕಟಿಸಲಾಗಿತ್ತು. ಆ ಪುಸ್ತಕದ ಲೇಖಕರು ಸ್ವಾಮಿ ನಿತ್ಯಸ್ವರೂಪಾನಂದರು. ಸ್ವಾಮಿಯವರು ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಸಂಸ್ಥಾಪಕರು. ಆ ಸಂಸ್ಥೆಯ ಮೂಲಕ ಸ್ವಾಮಿ ನಿತ್ಯಸ್ವರೂಪಾನಂದರು ಹೊಸ ಶಿಕ್ಷಣದ ನೀತಿಯನ್ನು ಪ್ರಪಂಚಕ್ಕೆ ತಿಳಿಸುವ ಉದ್ದೇಶದಿಂದ ಬರೆದಿದ್ದಾರೆ. ಬೆಳೆಯುತ್ತಿರುವಂಥ ಜಾಗತಿಕ ಆತ್ಮಸಾಕ್ಷಿಯ ಪ್ರಕ್ರಿಯೆಯನ್ನು ಮುಂದಿನ ತಲೆಮಾರಿನವರಿಗೆ ತಿಳಿಸಬೇಕೆಂಬುದು ಸಹ ಅವರ ಉದ್ದೇಶವಾಗಿತ್ತು. ಆ ಪುಸ್ತಕದ ಮುನ್ನುಡಿಯಲ್ಲಿ ತಮ್ಮ ಮೂಲಭೂತ ಗ್ರಹಿಕೆಯನ್ನು ಸ್ವಾಮಿಯವರು ಹೀಗೆ ಹೇಳಿದ್ದಾರೆ :– ಜಗತ್ತು ವಿಚ್ಛೇದಿತವಾಗದಂಥ ಪೂರ್ಣತೆಯುಳ್ಳದ್ದು. ಒಂದು ವಿಭಾಗದಲ್ಲಿ ಆಗುವಂಥ ಪ್ರಗತಿಯು ಅಂತಿಮವಾಗಿ ಪೂರ್ಣರೂಪದಲ್ಲಿ ಮುಂದುವರಿಯದಿದ್ದರೆ ಆ ಪ್ರಗತಿ ಯಶಸ್ವಿಯಾಗಲಾರದು. ಆದ್ದರಿಂದ ಮಾನವೀಯತೆಯು ಎಲ್ಲ ವಿಧದಲ್ಲಿಯೂ ಮತ್ತು ಕ್ರಿಯೆಗಳಲ್ಲಿಯೂ ಏಕೀಭೂತವಾಗಿರಬೇಕೆಂದು ಪ್ರಯತ್ನಿಸುತ್ತದೆ.

ಆರ್ನಾಲ್ಡ್ ಟೊಯನ್‌ಬಿ ಈ ಪುಸ್ತಕದ ಪರಿಚಯಮಾಡುತ್ತಾ ಈ ವಿಚಾರಕ್ಕೆ ಬಹು ಸೂಕ್ತವಾದ ಆಯಾಮವನ್ನು ತಂದು ಕೊಟ್ಟಿದ್ದಾರೆ. "ಗತಕಾಲದ ಪರಂಪರೆ ಭವಿಷ್ಯದ ತರಂಗವೆಂದು ನನಗೆ ಬಹು ವಿಶ್ವಸನೀಯವಾಗಿ ಅನಿಸುತ್ತದೆ" ಎಂದು ಟೊಯನ್‌ಬಿ ಹೇಳಿದ್ದಾರೆ.

ನಾವು ಈಗ ಯಾವ ಮಾನವ ಇತಿಹಾಸದ ಅಧ್ಯಾಯಯದಲ್ಲಿ ಕ್ರಮಿಸುತ್ತಿದ್ದೇವೆಯೊ ಅದರಲ್ಲಿ ನಮ್ಮ ಆಯ್ಕೆ ಇಡೀ ವಿಶ್ವ ಮತ್ತು ಭಿನ್ನಗೊಂಡ ವಿಶ್ವ ಇವುಗಳ ಮಧ್ಯೆ ಇರದೆ ಒಂದು ವಿಶ್ವ ಮತ್ತು ಅವಿಶ್ವದ ಮಧ್ಯೆ ಇದೆ. ಮಾನವಕುಲವು ಜೀವನವನ್ನು ಮತ್ತು ಒಳ್ಳೆಯದನ್ನು ಆಯ್ಕೆ ಮಾಡಿಕೊಳ್ಳುತ್ತದಯೆ ಹೊರತು ಮರಣವನ್ನು ಮತ್ತು ಕೆಟ್ಟದ್ದನಲ್ಲ ಎಂದು ನಾನು ನಂಬಿದ್ದೇನೆ. ಆದ್ದರಿಂದಲೇ ಒಂದು ವಿಶ್ವದ ಉಗಮದ ಬಗ್ಗೆ ನಂಬಿಕೆ ಇಟ್ಟಿದ್ದೇನೆ. ಇಪ್ಪತ್ತೊಂದನೆ ಶತಮಾನದಲ್ಲಿ ಮಾನವ ಜೀವನವು ಪುನಃ ಎಲ್ಲ ವಿಧಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಏಕೀಭವಿಸುತ್ತದೆಯೆಂದು ನಂಬಿದ್ದೇನೆ.

ಪಂಡಿತರು ಮತ್ತು ರಾಜನೀತಿಜ್ಞರು ಆಗಿದ್ದ ಡಾ॥ ಎಸ್. ರಾಧಾಕೃಷ್ಣನ್ ಅವರು ಈ ವಿಚಾರಕ್ಕೆ ಒಂದು ಆಧ್ಯಾತ್ಮಿಕ ರೂಪವನ್ನು ಕೊಟ್ಟರು, ಹಾಗೂ ಉದ್ಭವಿಸುತ್ತಿರುವ ಜಾಗತಿಕ ಘಟನೆಗಳ ಬಗ್ಗೆ ನಾವು ಹೊಸ ದೃಷ್ಟಿಕೋನವನ್ನು ಹೊಂದಬೇಕೆಂದು ಒತ್ತಾಯಿಸಿದರು. "ನಾವು ಮಾನವ ಕುಲದ ಆತ್ಮವನ್ನು ಸ್ಪರ್ಶಿಸಬೇಕಾಗಿದೆ ಏಕೆಂದರೆ ಆತ್ಮವು ಅವಿನಾಶಿ ಅದೇ ದೇಹವಲ್ಲ." ವ್ಯಕ್ತಿಯ ವಿಧಿಯು ಜೀವನದ ಒತ್ತಾಸೆಗಳ ದಿಕ್ಕನ್ನು, ಆ ಒತ್ತಾಸೆಗಳನ್ನು ದಿಗ್ದರ್ಶಿಸುವ ಜ್ಞಾನವನ್ನು ಮತ್ತು ಅದನ್ನು ರೂಪಿಸುವ ನಿಯಮಗಳನ್ನು ಅವಲಂಬಿಸಿರುವಂತೆಯೆ ಮಾನವಕುಲದ ವಿಧಿಯೂ ಅವಲಂಬಿಸಿರುತ್ತದೆ. ನಾವು ಒಂದು ವಿಶ್ವ ಜನಪದವನ್ನು ಕಟ್ಟಲು ಅನುಕೂಲವಾಗುವಂಥ ಮತ್ತು ಸಹಕಾರಾಧಾರಿತ ರಾಷ್ಟ್ರಗಳ ಸಮೂಹದಲ್ಲಿರಲು ಸಾಧ್ಯವಾಗುವಂಥ ಒಂದು ಜಾಗತಿಕ ಜನಪದವನ್ನು ನಿರ್ಮಾಣ ಮಾಡಲು ಆದರ್ಶಗಳು, ರೂಢಿಗಳು ಮತ್ತು ಭಾವನೆಗಳು ನಿಧಾನವಾಗಿ ರೂಪುಗೊಳ್ಳುವಂತೆ ಮಾಡಬೇಕು. ಬೆಳೆಯುತ್ತಿರುವ ಜಾಗತಿಕ ಆತ್ಮಸಾಕ್ಷಿಗೆ ಒಂದು ಆತ್ಮವನ್ನು ಕೊಡಬೇಕೆಂಬುದೇ ನಮ್ಮ ತಲೆಮಾರಿನ ಅತ್ಯಂತ ಉತ್ಕೃಷ್ಟ ಕಾರ್ಯವಾಗಿದೆ. ಅಲ್ಲದೆ ಜಾಗತಿಕ ಆತ್ಮದ ಕ್ರಿಯಾತ್ಮಕ ಅಸ್ತಿತ್ವವನ್ನು ತೋರ್ಪಡಿಸಲು ಸಹಾಯ ಮಾಡುವ ಸಂಸ್ಥೆಗಳನ್ನು ಕೂಡ ಅಭಿವೃದ್ಧಿ ಪಡಿಸುವುದು ನಮ್ಮ ಶ್ರೇಷ್ಠ ಕರ್ತವ್ಯವಾಗಿದೆ. ಇದರೊಂದಿಗೆ ಈ ಗುಣಧರ್ಮಗಳ ಬದ್ಧತೆಯನ್ನು ಮತ್ತು ತುಡಿತಗಳನ್ನು ಮುಂದಿನ ತಲೆಮಾರಿಗೆ ಪ್ರವಹಿಸುವುದರ ಜೊತೆಗೆ ಆ ಪೀಳಿಗೆಯನ್ನು ವಿಶ್ವನಾಗರೀಕರನ್ನಾಗಿಯೂ ತರಬೇತಿಗೊಳಿಸಬೇಕಾಗಿದೆ.

ಈ ಮೊದಲು ಕೂಡ ಸಂಯುಕ್ತ ವಿಶ್ವ ವ್ಯವಸ್ಥೆಯ ಹುಡುಕಾಟವು ಭಾರತದ ಮತ್ತು ವಿದೇಶದ ಚಿಂತನಶೀಲ ಮನಗಳನ್ನು ಮೋಹಿತಗೊಳಿಸಿತ್ತು. ಈ ವಿಷಯದ ಬಗ್ಗೆ ಶ್ರೀ ಅರವಿಂದೊರವರು ಆಳವಾದ ಚಿಂತನೆಯನ್ನು ಮಾಡಿದ್ದಾರೆ. ಅವರು ಎರಡು ಮುಖ್ಯ ಕೃತಿಗಳನ್ನು ರಚಿಸಿದ್ದಾರೆ. ಒಂದನೆಯದು, ಮಾನವ ಜಿವನ ವೃತ್ತ (The Human Cycle) ಮತ್ತು ಎರಡನೆಯದು ಮಾನವ ಐಕ್ಯತೆಯ ಆದರ್ಶ (The ideal of Human Unity) ಈ ಎರಡು ಗ್ರಂಥಗಳಲ್ಲಿ ಅರವಿಂದೋರವರು ಮಾನವತೆಯ ವಿಕಾಸದ ಹೆಜ್ಜೆಗಳನ್ನು ಗುರ್ತಿಸಲು ಪ್ರಯತ್ನಿಸಿದ್ದಾರೆ ಅಲ್ಲದೆ ಮಾನವತೆಯು ವಿಕಾಸಗೊಳ್ಳುತ್ತಾ ಸಾಮೂಹಿಕ ಜೀವನದ ವ್ಯವಸ್ಥಿತ ಪದ್ಧತಿಯನ್ನು ಹೇಗೆ ವಿಕಾಸಗೊಳಿಸಬೇಕೆಂಬುದರ ಬಗ್ಗೆಯೂ ತಿಳಿಸಲು ಅವರು ಪ್ರಯತ್ನಿಸಿದ್ದಾರೆ. ನಿಜವಾದ ಐಕ್ಯತೆಯ ಮುನ್ಸೂಚನೆಯಾಗಿ ಅಗತ್ಯವಾಗಿರುವ ನೈತಿಕ ಮತ್ತು ಆಧ್ಯಾತ್ಮಿಕ ಅದ್ವೈತದ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಮಾನವಕುಲದ ಆಸೆಯಾಗಿ ಒಂದು ಆಧ್ಯಾತ್ಮಿಕ ಆಧಾರಿತ ಧರ್ಮವನ್ನು ಅವರು ಕಲ್ಪಿಸಿಕೊಂಡಿದ್ದಾರೆ.

ಈ ಧರ್ಮವು ಒಂದು ದೈವಿಕ ಸತ್ಯವೆಂಬುದಿದೆ ಎಂಬ ಅರಿವನ್ನು ಹುಟ್ಟಿಸುವುದರ ಜೊತೆಗೆ ಆ ಧರ್ಮದಲ್ಲಿ ಇಡೀ ಮಾನವಕುಲವೇ ಒಂದು ಮತ್ತು ಆ ಏಕೀಭಾವನೆಯೇ ಉತ್ತಮ ಮಟ್ಟದ ಮಾನವ ಅಸ್ತಿತ್ವಕ್ಕೆ ಆಧಾರವಾಗುವುದೆಂದು ಕಲ್ಪಿಸಿಕೊಟ್ಟಿದ್ದಾರೆ. ವಾಸ್ತವವಾಗಿ ಮಾನವಕುಲದ ಐಕ್ಯತೆ ಪುರಾತನವಾದುದು. ಭಾರತದ ಋಷಿಗಳು ಬಹು ಸ್ಪಷ್ಟವಾಗಿ ಮಾನವರಷ್ಟೆ ಅಲ್ಲ ಸಮಸ್ತ ಸೃಷ್ಟಿಯೆ ಒಂದು ಕುಟುಂಬವೆಂಬುದಾಗಿ ಘೋಷಿಸಿದ್ದಾರೆ. ಯಾರು ಸುಸಂಸ್ಕೃತ ಮತ್ತು ಉದಾರ ದೃಷ್ಟಿಯನ್ನು ಹೊಂದಿದ್ದಾರೋ ಅವರಿಗೆ ಇಡೀ ವಿಶ್ವವೇ ಒಂದು ಕುಟುಂಬವಾಗಿದೆ : ಉದಾರ ಚರಿತಾನಂ ತು ವಸುಧೈವ ಕುಟುಂಬಕಂ.

ಹೊಸ ಸಹಸ್ರಮಾನ ಪ್ರಾರಂಭವಾದುದರಿಂದ ಮುಂಬರುವ ಘಟನೆಗಳ ಸ್ವರೂಪದ ಬಗ್ಗೆ ಬಹು ಪ್ರಚೋದಕ ಚರ್ಚೆ ನಡೆಯುತ್ತಿರುವುದು ಎಲ್ಲ ಕಡೆಗೂ ಕೇಳಿ ಬರುತ್ತಿದೆ. ಹೊಸ ಶಬ್ದ ಭಂಡಾರವು ಕೂಡ ರೂಢಿಗೆ ಬರುತ್ತಿದೆ. ಈಗ ಜಾಗತಿಕ ಗ್ರಾಮ, ಜಾಗತಿಕ ಸಮಾಜ ಮುಂತಾದ ಪದಗುಚ್ಛಗಳ ಉಪಯೋಗವಾಗುತ್ತಿವೆ. ಉದ್ಭವಗೊಳ್ಳುತ್ತಿರುವ ಪರಿಸ್ಥಿತಿಯ ಪರಿಣಾಮಗಳು ಕೇವಲ ಸೈದ್ಧಾಂತಿಕವಾಗಿಲ್ಲ. ಅವುಗಳ ಅನುಭವ ದಿನನಿತ್ಯದ ಜೀವನದಲ್ಲಿ ಆಗುತ್ತಿದೆ. ಅವುಗಳ ದೂರಗಾಮಿ ಪರಿಣಾಮ ಇನ್ನೂ ನಿಖರವಾದ ಗ್ರಹಿಕೆಗೆ ಸಿಕ್ಕಿಲ್ಲ. ಬೇರೆಲ್ಲ ವಿಷಯಗಳಂತಯೆ ಅವು ಕೂಡ ಒಳ್ಳೆಯದಾಗಿರಬಹುದು ಅಥವಾ ಹಾನಿಕಾರಕವಾಗಿರಬಹುದು. ಹಳೆಯ ಕಾಲದ ಎಲ್ಲ ಸೈದ್ಧಾಂತಿಕ ಚೌಕಟ್ಟುಗಳು ಅಲುಗಾಡುತ್ತಿವೆ. ಬಹಳಷ್ಟು ಹಳೆಯ ಸಾಮಾಜಿಕ ಮತ್ತು ರಾಜಕೀಯ ರಚನೆಗಳು ತಮ್ಮೆಲ್ಲ ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯಗಳೊಂದಿಗೆ ಬಹು ಗಂಭೀರವಾದ ಸವಾಲನ್ನು ಎದುರಿಸುತ್ತಿವೆ. ಇವುಗಳನ್ನು ಹೇಗೆ ಎದುರಿಸಬೇಕೆಂಬುದೇ ಈಗ ಪ್ರಧಾನವಾದ ಪ್ರಶ್ನೆಯಾಗಿದೆ. ಈ ಪ್ರಶ್ನೆಯೇ ವಿಶ್ವದಾದ್ಯಂತ ಇರುವ ಬುದ್ಧಿಜೀವಿಗಳನ್ನು ವೈಚಾರಿಕ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ. ಎಲ್ಲ ಬಗೆಯ ಚರ್ಚೆಗಳಲ್ಲಿ ಕರಾರುವಕ್ಕಾದ ಶಬ್ದಗಳು ಬಹಳ ಮಹತ್ವದ್ದೆನಿಸುತ್ತವೆ. ಕೆಲವೊಂದು ಸಲ ಈ ವಿಷಯವೆ ಹಿಂದಕ್ಕೆ ಸರಿಯುತ್ತದೆ. ಇದರ ಪರಿಣಾಮವಾಗಿ ಗೊಂದಲ ಮತ್ತು ತಪ್ಪು ತಿಳುವಳಿಕೆಗಳೂ ಉದ್ಭವಿಸುತ್ತವೆ. ಜಾಗತೀಕರಣ ಮತ್ತು ವಸುಧೈವ ಕುಟುಂಬಕಂ ಈ ಪದಗಳು ಪರ್ಯಾಯ ಪದಗಳೆಂದು ಉಪಯೋಗಿಸಲಾಗುತ್ತದೆ. ಆದರೆ ಅವು ಹಾಗಿಲ್ಲ. ಅವೆರಡೂ ಮೂಲಭೂತವಾಗಿಯೇ ಪ್ರತ್ಯೇಕವಾದ ದೃಷ್ಟಿಕೋನ ಮತ್ತು ವಿಧಾನಗಳಾಗಿವೆ. ಜಾಗತೀಕರಣವು ವೈಜ್ಞಾನಿಕ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ಪರಿಣಾಮವಾಗಿದೆ. ಜಾಗತೀಕರಣವು ಕೈಗಾರಿಕಾಧಾರಿತ ನಾಗರೀಕತೆ, ವಿಶ್ವವ್ಯಾಪಾರ ಮತ್ತು ವಾಣಿಜ್ಯವು ಬೆಳೆಯಲು ಸಹಕಾರಿಯಾಗಿದೆ

ಅದು ಸಹಜವಾಗಿ ಭೌತಿಕ ಸ್ವಭಾವದ್ದು ಮತ್ತು ಕೊಳ್ಳುಬಾಕ ಸ್ವಭಾವದ್ದೂ ಆಗಿದೆ. ಅದನ್ನು ಪ್ರಚೋದಿಸುವ ಶಕ್ತಿ ಸ್ವಾರ್ಥವಾಗಿದೆ. ಅದರ ಯಶಸ್ಸು ಮಾನವನ, ರಾಷ್ಟ್ರಗಳ ಮತ್ತು ಪ್ರಕೃತಿಯ ಶೋಷಣೆಯನ್ನು ಅವಲಂಬಿಸಿದೆ. ಅದರ ಕಾರ್ಯವಿಧಾನದಲ್ಲಿ ಯಾವುದೇ ಸಾಮಾಜಿಕ ಅಥವಾ ನೈತಿಕ ಗಣನೆಯಿಲ್ಲ. ಆದ್ದರಿಂದ ಸಹಜವಾಗಿಯೆ ಅದು ಸಂಘರ್ಷಕ್ಕೂ, ಸ್ಪರ್ಧೆಗೂ ವೈರತ್ವಕ್ಕೂ ಮತ್ತು ಅಂತಿಮವಾಗಿ ವಿನಾಶಕ್ಕೂ ದಾರಿಯಾಗುತ್ತದೆ.

ವಸುಧೈವ ಕುಟುಂಬಕಂ ಮುಖ್ಯವಾಗಿ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಕಲ್ಪನೆ. ಅದು ಇಡೀ ವಿಶ್ವವನ್ನೇ ತನ್ನ ನಿಜ ಕುಟುಂಬದಂತೆ ಪರಿಭಾವಿಸುತ್ತದೆ. ಪ್ರೀತಿ ಮತ್ತು ಸಮರಸತೆ, ಸಹಕಾರ ಮತ್ತು ಪರಸ್ಪರ ಬೆಂಬಲಗಳು ಮೂಲಭೂತ ಗುಣಗಳಾಗಿರುತ್ತವೆ. ಅಂದರೆ ಒಂದು ಕುಟುಂಬದಲ್ಲಿರುವಂಥ ಲಕ್ಷಣಗಳು ಇದರಲ್ಲಿಯೂ ಇವೆ. ಹಾಗಾಗಿ ಶೋಷಣೆಯ ವಿಚಾರ ಇಲ್ಲಿ ಪರಕೀಯ ವಸ್ತು. ವ್ಯಕ್ತಿಗತ ಆಸಕ್ತಿ ಮತ್ತು ಸಾಮುದಾಯಿಕ ಆಸಕ್ತಿಗಳು ಪರಸ್ಪರ ಪೂರಕವಾಗಿರುತ್ತವೆ. ಅಪರಿಮಿತವಾದ ಕೊಳ್ಳುಬಾಕತನಸಂಸ್ಕೃತಿ ಇಲ್ಲಿ ನಿಷೇಧಿತ. ಏಕೆಂದರೆ ಪ್ರತಿಯೊಬ್ಬರ ಅಗತ್ಯಗಳನ್ನು ಪೂರೈಸುವುದೆಂದರೆ ಯಾರೊಬ್ಬರು ತಮಗೆ ಬೇಕಾದುದಕ್ಕಿಂತ ಹೆಚ್ಚಿನ ಪಾಲನ್ನು ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ. ಇರುವ ಒಂದು ರೊಟ್ಟಿಯನ್ನೇ ಹೆಚ್ಚು ಕಡಿಮೆ ಸಮನಾಗಿ ಹಂಚಿಕೊಳ್ಳಬೇಕಾಗುವುದು. ಅಂಥ ಒಂದು ವ್ಯವಸ್ಥೆಯಲ್ಲಿ ಒಂದು ಕುಟುಂಬದಲ್ಲಿರುವಂತೆಯೆ ಸ್ವಯಂ ನಿಗ್ರಹಿತವಾದ ಮಿತಿಗಳು ಇರುವವು. ಆದ್ದರಿಂದ ಈ ಎರಡು ಕಲ್ಪನೆಗಳಲ್ಲಿ ಮತ್ತು ಅವುಗಳಲ್ಲಿರುವ ಸಾರದಲ್ಲಿ ಸ್ಪಷ್ಟವಾಗಿ ವ್ಯತ್ಯಾಸ ಮಾಡುವುದು ಅಗತ್ಯವಾಗುತ್ತದೆ. ಮಾನವಕುಲವು ತಪ್ಪಿಸಿಕೊಳ್ಳಲಾಗದೆ ಇರುವಂಥದು ಜಾಗತೀಕರಣವೆಂದೂ, ವಸುಧೈವ ಕುಟುಂಬಕಂ ಎಂಬುದು ಒಂದು ಕಲ್ಪನೆಯಲ್ಲದಿದ್ದರು ಅದೊಂದು ಕನಸೆಂದೂ ವಾದ ಮಾಡಬಹುದು. ವಸುಧೈವ ಕುಟುಂಬಕಂ ವಿಚಾರವು ಇದುವರೆಗೂ ಆಚರಣೆಗೆ ಬರದೆ ಇರುವುದರಿಂದ ಅದೊಂದು ಗಗನಕುಸುಮವಲ್ಲದೆ ಮತ್ತೇನಲ್ಲ. ಆದ್ದರಿಂದ ಅಂಥ ಅವ್ಯವಹಾರಿಕ ವಿಚಾರವನ್ನು ಕುರಿತು ಚರ್ಚಿಸುವ ಅಗತ್ಯವಿಲ್ಲ. ಆ ಚರ್ಚೆ ಎಷ್ಟೇ ಮೋಹಕವಾಗಿರಬಹುದು ಆದರೆ ಈ ವಾದ ವಸ್ತುಸ್ಥಿತಿಗೆ ವಿರೋಧವಾದುದಾಗಿದೆ. ಬೇರೆ ಬೇರೆ ದೇಶಗಳ ಜನರು ಸಂಪರ್ಕವನ್ನು ಬೆಳೆಸಿಕೊಂಡು ಪದಾರ್ಥಗಳನ್ನು ಮತ್ತು ಸೇವೆಗಳನ್ನು ವಿನಿಮಯಮಾಡಿಕೊಳ್ಳುವುದರ ಜೊತೆಗೆ ವಿಚಾರಗಳನ್ನು ಮತ್ತು ಸಂಸ್ಕೃತಿಯನ್ನು ವಿನಿಮಯ ಮಾಡಿಕೊಂಡಿದ್ದಂಥ ಕಾಲವೊಂದಿತ್ತೆಂದು ಇತಿಹಾಸವು ಸ್ಪಷ್ಟವಾಗಿ ಹೇಳುತ್ತದೆ. ವಿವಿಧ ಸಂಸ್ಕೃತಿಗಳು ಮತ್ತು ನಾಗರೀಕತೆಗಳು ನಿಯಮಿತವಾಗಿ ಪರಸ್ಪರ ಸಂವಾದದಲ್ಲಿ ತೊಡಗಿರುತ್ತಿದ್ದವು.

ನೌಕಾಯಾನದ ಅದ್ಭುತವಾದ ಸಾಹಸಗಳು ಮತ್ತು ಭೂ ಮಾರ್ಗದ ಮೂಲಕ ನಡೆದ ವ್ಯಾಪಾರಗಳು ವಿಶ್ವದ ಅಂಚಿನಲ್ಲಿಯ ಜನರನ್ನು ಹತ್ತಿರ ತಂದಿದ್ದವು. ಇಂಥ ಯಾತ್ರೆಗಳನ್ನು ಬಹಳ ಕಡಿಮೆ ಸಂಖ್ಯೆಯ ಜನರು ಕೈಗೊಂಡಿರಬಹುದು, ಹಾಗೆ ನೋಡಿದರೆ ಇಂದು ಕೂಡ ಪ್ರತ್ಯಕ್ಷವಾಗಿ ಪ್ರವಾಸಮಾಡುವ ಜನರ ಸಂಖ್ಯೆ ಕಡಿಮೆಯೆ ಇದೆ. ಆದರೆ ಇದರ ಅರ್ಥ ಇಂದಿನ ಯುಗದ ಸಂಪರ್ಕದ ಉಪಗ್ರಹಗಳಿಂದಾಗಿರುವ ಅದ್ಭುತ ಪರಿಣಾಮವನ್ನು ನಿರಾಕರಿಸುವಂತಿಲ್ಲ. ಆದರೆ ಇಂದಿನ ಕಾಲದಲ್ಲಿ ಸಂಪರ್ಕದ ಪರಿಣಾಮ ಹಿಂದಿನ ಕಾಲಕ್ಕಿಂತ ಹೆಚ್ಚು ಲಾಭದಾಯಕವಾಗಿತ್ತೆಂಬುದು ಗೊತ್ತಾಗುತ್ತದೆ.

ನಮ್ಮ ತಾಯಿನಾಡಿನ ಪ್ರೀತಿ ನಮ್ಮ ಕನಸಿನ ವಿಶ್ವ ಕುಟುಂಬಕ್ಕೆ ವಿರೋಧವಾಗುತ್ತದೆಯೆ? ಖಂಡಿತವಾಗಿಯೂ ಇಲ್ಲ. ಬಂಗಾಲಿ ಸಾಹಿತ್ಯದ ದೊಡ್ಡ ಕೃತಿಕಾರರಾದ ಶರತ್‌ಚಂದ್ರರು ಒಂದು ಸಲ ಹೀಗೆಂದರು. "ಯಾರು ತನ್ನ ಮನೆಯೆಂದು ಹೇಳುವ ಆ ಒಂದು ಚಿಕ್ಕ ಪ್ರದೇಶವನ್ನೇ ಪ್ರೀತಿಸಲಾರರೋ ಅವರು ಹೇಗೆ ತಾನೆ ಇಡೀ ದೇಶವನ್ನು ಮತ್ತು ಜಗತ್ತನ್ನು ಪ್ರೀತಿಸಬಲ್ಲರು. ತಮ್ಮ ದೇಶದ ಬಗ್ಗೆ ಇರುವ ಪ್ರೀತಿ ಅದರ ಪರಂಪರೆಗಳ ಬಗ್ಗೆ ಇರುವ ಪ್ರೀತಿ ಮತ್ತು ಅಲ್ಲಿ ವಾಸಿಸುವ ಜನರ ಬಗ್ಗೆ ಇರುವ ಪ್ರೀತಿಯು ಜಗತ್ತಿನ ಬಗ್ಗೆ ಇರಬೇಕಾದ ಪ್ರೀತಿಯನ್ನು ತಪ್ಪಿಸುವುದಿಲ್ಲ. ಅದೇ ರೀತಿ ಇಡೀ ಮಾನವ ಕುಲ ಒಂದು ಕುಟುಂಬವೆಂಬ ವಿಚಾರದಿಂದಲೂ ವಿಮುಖ ಮಾಡುವುದಿಲ್ಲ. ದೇಶಾಭಿಮಾನ ಮತ್ತು ಜಾಗತೀಕರಣ ನನ್ನ ಅಭಿಪ್ರಾಯದಲ್ಲಿ ರೂಪಗೊಳ್ಳುತ್ತಿರುವ ವಿಶ್ವನಾಗರೀಕತೆಯ ಕಲ್ಪನೆಗೆ ಬದ್ಧವಾಗಿರುವಂಥವು ಮತ್ತು ಸಹಕಾರಿಯಾದಂಥವು.

ಈ ವಿಶ್ವದ ಒಂದು ಅಣು ಜಗತ್ತನ್ನು ತನ್ನೊಂದಿಗೆ ತೆಗೆದುಕೊಂಡು ಹೋಗಲಾರದೆ ಮುಂಬರಿಯಲಾರದು ಅದನ್ನು ಇಡೀ ಜಗತ್ತು ಅನುಸರಿಸದಿದ್ದರೆ ಪ್ರಗತಿಯಾಗಲಾರದು. ಇಂದಿನ ಯಾವುದೇ ಸಮಸ್ಯೆಯನ್ನು ಜನಾಂಗೀಯ, ರಾಷ್ಟ್ರೀಯ ಅಥವಾ ಇನ್ನಾವುದೇ ಸಂಕುಚಿತ ಆಧಾರದಿಂದ ಬಗೆಹರಿಸಲಾಗದೆಂದು ದಿನಕಳೆದಂತೆ ಸ್ಪಷ್ಟವಾಗುತ್ತಿದೆ. ಯಾವುದೇ ವಿಚಾರವಿರಲಿ, ಅದು ಇಡೀ ಜಗತ್ತನ್ನು ಆವರಿಸಿಕೊಳ್ಳಲೇ ಬೇಕು. ಅದೇ ರೀತಿ ಇಡೀ ಮಾನವ ಕುಲವನ್ನು ಸಹ."

– ಸಾಭಾರ : ಗ್ಲೋಬಲೈಸೇಷನ್ ಪುಸ್ತಕ

– ಅನು : ಸು.ಕೌ

* * *

ಜನಪದ ನಿಲಯದ ಅಂತರಂಗದಲ್ಲಿ - ೩೬

- ಸುರೇಂದ್ರ ಕೌಲಗಿ

ಹೊಸತನವೇಬಾಳು; ಹಳಸಿಕೆಯೆಲ್ಲ ಸಾವು ಬಿಡು।
ರಸವು ನವನವತೆಯಿಂದನುದಿನವು ಹೊಮ್ಮಿ॥
ಹಸನೊಂದು ನುಡಿಯಲ್ಲಿ ದಡೆಯಲ್ಲಿ ನೋಟದಲಿ।
ಪಸರುತಿರೆ ಬಾಳ್ ಚೆಲುವು- ಮಂಕುತಿಮ್ಮ॥

- ಡಿ.ವಿ.ಜಿ



ಕಳೆದ ಸಲ ವಯಸ್ಕ ಮಹಿಳೆಯರಿಗಾಗಿ ನಡೆಸಲಾಗುತ್ತಿದ್ದ ಸಂಕ್ಷಿಪ್ತ ಶಿಕ್ಷಣ ಶಾಲೆಯ ಬಗ್ಗೆ ಪ್ರಸ್ತಾಪಿಸಿದ್ದೆ. ಆ ಶಾಲೆಯನ್ನು ಕುರಿತು ಇನ್ನೂ ಕೆಲವು ವಿಷಯಗಳನ್ನು ತಿಳಿಸಬೇಕಾದುದು ಅಗತ್ಯವಾಗಿದೆ. ಇದಕ್ಕೆ ಮುಖ್ಯ ಕಾರಣ ಈ ಸಂಕ್ಷಿಪ್ತಶಾಲೆಯ ಕಾರ್ಯಕ್ರಮ ಜನಪದ ಸೇವಾ ಟ್ರಸ್ಟನ್ನು ಬೆಳೆಸುವುದರಲ್ಲಿ ಒಂದು ಮಹತ್ವದ ಕಾರ್ಯಕ್ರಮವಾಗಿತ್ತು. ಅಲ್ಲದೆ ಟ್ರಸ್ಟಿನ ಧ್ಯೇಯೋದ್ದೇಶದ ಪೂರೈಕೆಗೆ ಬಹು ಪ್ರಮುಖವಾದ ಸಾಧನವಾಗಿತ್ತು. ಈ ಕಾರ್ಯಕ್ರಮದ ಮೂಲಕ ಎರಡು ಪ್ರಮುಖ ಸಾಮಾಜಿಕ ಉದ್ದೇಶಗಳನ್ನು ನೆರವೇರಿಸುವಂಥ ಒಂದು ಅವಕಾಶವು ದೊರೆತಿತ್ತು. ಮೊದಲನೆಯ ಸಾಮಾಜಿಕ ಉದ್ದೇಶ ತೊಂದರೆಗೊಳಗಾಗಿರುವ ವಯಸ್ಕ ಮಹಿಳೆಯರಿಗೆ ಸೂಕ್ತ ಶಿಕ್ಷಣ ಕೊಟ್ಟು ಅವರು ಮುಂಬರಿಯುವುದಕ್ಕೆ ಸಹಾಯ ಮಾಡುವಂಥದು. ಎರಡನೆಯದು ಅದೇ ಸಮಯಕ್ಕೆ ಪ್ರಾರಂಭವಾಗಿದ್ದ ಅಂಗವಿಕಲ ಮಕ್ಕಳ ಸೇವಾ ಕೇಂದ್ರವಾದ ಕರುಣಾಗೃಹದ ಮಕ್ಕಳಿಗೂ ವಿದ್ಯಾಭ್ಯಾಸ ದೊರೆಯುವಂತೆ ಸಾಧ್ಯವಾದುದು. ೬೦ರ ದಶಕಗಳಲ್ಲಿ ಹುಡುಗಿಯರ ವಿದ್ಯಾಭ್ಯಾಸಕ್ಕೆ ಇನ್ನೂ ಇಂದಿನಷ್ಟು ಮಹತ್ವ ಬಂದಿರಲಿಲ್ಲ ಬಾಲಕಿಯರ ಶಿಕ್ಷಣಕ್ಕೆ ಮಹತ್ವ ಇಲ್ಲದೆ ಇದ್ದಾಗ ಇನ್ನು ವಯಸ್ಕ ಮಹಿಳೆಯರ ಶಿಕ್ಷಣದ ಬಗ್ಗೆ ಹೆಚ್ಚು ಒತ್ತು ಇರದೆ ಇದ್ದಂಥ ಸಮಯದಲ್ಲಿ ವಯಸ್ಕ ಮಹಿಳೆಯರಿಗೆ ಶಿಕ್ಷಣ ಕೊಡುವಂಥ

ಅವಕಾಶ ಟ್ರಸ್ಟಿಗೆ ದೊರೆತದ್ದು ವಿಶೇಷ ಸಂಗತಿಯೆ ಸರಿ. ಟ್ರಸ್ಟ್ ನಡೆಸಿದ ಸಂಕ್ಷಿಪ್ತ ಶಿಕ್ಷಣ ಶಾಲೆಯ ಐದು ತಂಡಗಳಲ್ಲಿ ಇದ್ದಂಥ ಮಹಿಳೆಯರ ಸಮಸ್ಯೆಗಳು ವಿವಿಧ ಬಗೆಯದಾಗಿದ್ದವು. ಅವರಲ್ಲಿ ಕೆಲವರು ಚಿಕ್ಕವಯಸ್ಸಿನಲ್ಲಿಯೆ ವಿಧವೆಯಾರಾಗಿದ್ದರು. ಎರಡನೆಯ ಮದುವೆಯ ಅವಕಾಶ ಅವರಿಗೆ ಇರಲಿಲ್ಲ. ಈ ಶಾಲೆಯ ಬಹಳಷ್ಟು ವಿದ್ಯಾರ್ಥಿನಿಯರು ಗ್ರಾಮೀಣ ಪ್ರದೇಶದಿಂದಲೆ ಬಂದವರಾಗಿದ್ದರಿಂದ ಅವರು ಎದುರಿಸುತ್ತಿದ್ದ ಸಾಮಾಜಿಕ ಸಮಸ್ಯೆಗಳಿಗೆ ಅವರ ಊರಿನಲ್ಲಿಯೆ ಪರಿಹಾರ ಪಡೆಯುವುದು ಕಷ್ಟವಾಗಿತ್ತು. ಆದ್ದರಿಂದ ಅವರು ದೂರದ ಊರಿಗೆ ಹೋಗಿ ಅಲ್ಲಿ ತಮ್ಮ ಭವಿಷ್ಯವನ್ನು ನೆರ್ಪುಗೊಳಿಸಿಕೊಳ್ಳವ ಪ್ರಯತ್ನ ಮಾಡಬೇಕಾದುದು ಅನಿವಾರ್ಯವಾಗಿತ್ತು. ಇನ್ನು ಕೆಲವು ಮಹಿಳೆಯರು ಪರಿತಕ್ತೆಯರಾಗಿದ್ದರು. ಆದ್ದರಿಂದ ಪುನಃ ಕುಟುಂಬ ಜೀವನ ನಡೆಸುವುದು ಅವರಿಗೆ ಸಾಧ್ಯವಿರಲಿಲ್ಲ. ಇನ್ನು ಕೆಲವು ಮಹಿಳೆಯರು ಹೇಗೋ ಎಸ್.ಎಸ್.ಎಲ್.ಸಿಯವರೆಗೆ ಓದಿ ಪರೀಕ್ಷೆಯಲ್ಲಿ ಪಾಸಾಗದೆ ಮನೆಯಲ್ಲಿ ಕುಳತಂಥವರಾಗಿದ್ದರು. ಪುನಃ ಶಾಲೆಗೆ ಹೋಗುವ ಸಂಭವವಿರಲಿಲ್ಲ. ಖಾಸಗಿ ಪಾಠವನ್ನು ಹೇಳಿಸಿಕೊಂಡು ಪುನಃ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಎದುರಿಸುವುದು ಅವರಿಗೆ ಕಷ್ಟಸಾಧ್ಯವಾಗಿತ್ತು. ಈ ಮುಂತಾದ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಂಥವರಾಗಿದ್ದರು ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯರು. ಇನ್ನೂ ಕೆಲವು ವಿದ್ಯಾರ್ಥಿನಿಯರು ಮದುವೆಯ ವಯಸ್ಸನ್ನು ಮೀರಿದವರಾಗಿದ್ದರು. ಮದುವೆಯಾಗುವ ಸಂಭವ ತೀರ ಕಡಿಮೆಯಿತ್ತು. ಕುಮಾರಿಯರಾಗಿದ್ದು ಯಾವ ಕೆಲಸವೂ ಇಲ್ಲದೆ ಮನೆಯಲ್ಲಿ ಸುಮ್ಮನೆ ಕುಳಿತುಕೊಂಡಿರುವುದು ಇನ್ನೂ ಹೆಚ್ಚಿನ ನೋವಿನ ಸಂಗತಿಯಾಗಿತ್ತು. ಈ ಪ್ರಕಾರದ ವಿವಿಧ ಸಮಸ್ಯೆಗಳನ್ನೊಳಗೊಂಡ ೩೦ ವಿದ್ಯಾರ್ಥಿನಿಯರ ತಂಡವನ್ನು ಎರಡು ವರ್ಷ ವಸತಿ ಸೌಕರ್ಯದೊಂದಿಗೆ ಇಟ್ಟುಕೊಂಡು ಅವರಿಗೆ ವಿದ್ಯಾಭ್ಯಾಸ ಮಾಡಿಸುವುದು ಸುಲಭದ ಕೆಲಸವಾಗಿರಲಿಲ್ಲ. ಅವರಲ್ಲಿ ಕೆಲವರು ಹೆಚ್ಚು ಬುದ್ಧಿಶಾಲಿಗಳಾಗಿದ್ದರು, ಇನ್ನು ಕೆಲವರು ಮಂದಗಾಮಿಗಳಾಗಿದ್ದರು, ಮತ್ತೆ ಇನ್ನೂ ಕೆಲವರು ನಿಧಾನ ಪ್ರವೃತ್ತಿಯುಳ್ಳವರಾಗಿದ್ದರು. ಅಲ್ಲದೆ ಅವರ ಈ ಮೊದಲ ವಿದ್ಯಾಭ್ಯಾಸದ ಮಟ್ಟವು ಸಹ ಬೇರೆ ಬೇರೆಯಾಗಿತ್ತು. ಇಷ್ಟು ಪ್ರಕಾರದ ವೈವಿಧ್ಯತೆಯನ್ನು ಹೊಂದಿದ್ದ ವಿದ್ಯಾರ್ಥಿನಿಯರಲ್ಲಿ ಶೈಕ್ಷಣಿಕವಾಗಿ, ಮಾನಸಿಕವಾಗಿ ಮತ್ತು ವೈಚಾರಕವಾಗಿ ಏಕತೆಯನ್ನು ತರುವುದು ಒಂದು ಹೋರಾಟವೆ ಆಗಿತ್ತು. ಅವರಲ್ಲಿ ಕೆಲವರು ಬಹು ಸಮಸ್ಯಾತ್ಮಕ ಮಹಿಳೆಯರೂ ಆಗಿದ್ದರು. ದಿನಬೆಳಗಾದರೆ ಒಂದಿಲ್ಲ ಒಂದು ವಿಷಯದಲ್ಲಿ ಸಮಸ್ಯೆಯನ್ನುಂಟು ಮಾಡುತ್ತಿದ್ದರು. ಅವರಿಗೆ ಪಾಠ

ಮಾಡುತ್ತಿದ್ದ ಉಪಾಧ್ಯಾಯನಿಯರು ಸಹ ತಮ್ಮ ವಿದ್ಯಾರ್ಥಿನಿಯರನ್ನು ಕುರಿತು ಅನೇಕ ದೂರುಗಳನ್ನು ಹೇಳುತ್ತಿದ್ದರು. ನನ್ನೊಂದಿಗೆ ವ್ಯವಸ್ಥಾಪಕ ವರ್ಗದಲ್ಲಿದ್ದುಕೊಂಡು ಮೇಲ್ವಿಚಾರಣೆ ಮಾಡಬೇಕಾಗಿದ್ದ ಗಿರಿಜಾರವರು ಸ್ವತಃ ಈ ತಂಡದಲ್ಲಿ ವಿದ್ಯಾರ್ಥಿನಿಯಾಗಿದ್ದರು. ಗಿರಿಜಾರವರು ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯರೊಂದಿಗೆ ಸಹವಿದ್ಯಾರ್ಥಿನಿಯಾಗಿ ಮತ್ತು ವ್ಯವಸ್ಥಾಪಕ ಮಂಡಳಿಯ ಸದಸ್ಯರಾಗಿದ್ದುಕೊಂಡು ಎರಡು ನೆಲೆಯಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಒಂದು ಅನುಕೂಲ ಪರಿಸ್ಥಿತಿಯಿತ್ತು. ಅದೇನೆಂದರೆ ಶಾಲೆಯ ವಿದ್ಯಾರ್ಥಿನಿಯರಿಗೆ ಪಾಠ ಮಾಡಲು ಟ್ರಸ್ಟಿನ ಸಂಸ್ಥಾಪಕ ಸದಸ್ಯರಾಗಿದ್ದ ಮತ್ತು ನನ್ನ ಎಲ್ಲ ಕೆಲಸಗಳಿಗೆ ಮಾರ್ಗದರ್ಶಕರು ಮತ್ತು ಪ್ರೋತ್ಸಾಹವನ್ನೀಯುವಂಥವರಾಗಿದ್ದ ಶ್ರೀ ಬಿ.ಆರ್. ಪ್ರಾಣೇಶರಾವ್‌ರವರು ಮೈಸೂರಿನಿಂದ ಪ್ರತಿವಾರವು ತಪ್ಪದೆ ಪಾಠ ಮಾಡಲು ಬರುತ್ತಿದ್ದರು. ಹೀಗೆ ಅವರು ವಾರ ವಾರ ಬಂದಾಗಲೆಲ್ಲ ವಿದ್ಯಾರ್ಥಿನಿಯರಿಗೆ ಅನೇಕ ಹಿತವಚನಗಳನ್ನು ಹೇಳುತ್ತಿದ್ದರು. ಅವರ ಸಾತ್ವಿಕ ವ್ಯಕ್ತಿತ್ವ ಮತ್ತು ಅವರು ಕಸ್ತೂರ ಬಾ ಟ್ರಸ್ಟಿನ ಮೂಲಕ ಮಾಡಿದ್ದ ಮಹಿಳೆಯರ ಸೇವೆಯ ಅನುಭವ ಇಲ್ಲಿ ತುಂಬಾ ಉಪಯೋಗಕ್ಕೆ ಬರುತ್ತಿದ್ದವು. ಪ್ರಾಣೇಶರಾವ್‌ರವರ ಈ ವಾರದಭೇಟಿ ಶಾಲೆಯನ್ನು ವ್ಯವಸ್ಥಿತವಾಗಿ ಮತ್ತು ಯಾವ ಸಮಸ್ಯೆಯೂ ಇಲ್ಲದೆ ನಡೆಸಿಕೊಂಡು ಬರಲು ತುಂಬಾ ಸಹಕಾರಿಯಾಗಿತ್ತು. ಪ್ರಾಣೇಶರಾವ್‌ರವರ ಆ ಕರ್ತವ್ಯಪ್ರಜ್ಞೆ, ಸಮಯನಿಷ್ಠೆ ಮತ್ತು ಬೋಧನಾಕ್ರಮ ಹಲವಾರು ವರ್ಷಗಳ ನಂತರವೂ ಮನಸ್ಸಿನ ಮೇಲೆ ವಜ್ರಲೇಪದಂತೆ ಗಟ್ಟಿಯಾಗಿ ಉಳಿದಿದೆ. ಅವರು ಪಾಠಕ್ಕೆ ಬರುವ ದಿನವನ್ನು ಮತ್ತು ಸಮಯವನ್ನು ಗಿರಿಜಾರವರು ಮತ್ತು ನಾನು ಬಹಳ ಉತ್ಸಾಹದಿಂದ ಎದಿರು ನೋಡುತ್ತಿದ್ದೆವು ಮತ್ತು ಅವರ ಆತಿಥ್ಯವನ್ನು ಮಾಡಲು ಸಿದ್ಧರಾಗಿರುತ್ತಿದ್ದೆವು. ಅವರು ಬಂದು ಹೋಗುವುದೆ ನಮಗೊಂದು ಹಬ್ಬವಾಗಿರುತ್ತಿತ್ತು. ಬಿಳಿ ಖಾದಿ ಪಾಯಜಮ ಮತ್ತು ಬಿಳಿ ಖಾದಿ ಜುಬ್ಬ ಹಾಕಿಕೊಂಡು ದೃಢವಾದ ಹೆಜ್ಜೆಯೊಂದಿಗೆ ಅವರು ಬರುತ್ತಿದ್ದುದು ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ.

ಶ್ರೀ ಪ್ರಾಣೇಶರಾವ್‌ರವರ ಪಾಠವನ್ನು ವಿದ್ಯಾರ್ಥಿನಿಯರು ಬಹು ಸಂತೋಷದಿಂದ ಕೇಳುತ್ತಿದ್ದರು. ಪ್ರಾಣೇಶರಾವ್‌ರವರು ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕೂಡ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದುದರಿಂದ ಅವರಲ್ಲಿ ವಿಷಯದ ಬೋಧನೆಯಕಲೆ ಕರತಲಾಮಲಕವಾಗಿತ್ತು. ಅನೇಕ ದೈನಂದಿನ ಜೀವನದ ಉದಾಹರಣೆಗಳಿಂದ ಅರ್ಥಶಾಸ್ತ್ರದಂಥ ಗಹನ ವಿಷಯವನ್ನು ಸಾಮಾನ್ಯದರ್ಜೆಯ ವಿದ್ಯಾರ್ಥಿನಿಯರಿಗೆ ಮನಮುಟ್ಟುವಂತೆ

ಬೋಧಿಸುತ್ತಿದ್ದರು. ಆಗಿನ ಕಾಲದಲ್ಲಿ ಇಂದಿನಷ್ಟು ಮೇಲುಕೋಟೆಗೆ ಬಸ್ ಸೌಕರ್ಯವಿರಲಿಲ್ಲ ಆದರೂ ಸಹ ಹೊತ್ತಿಗೆ ಸರಿಯಾಗಿ ಗೊತ್ತುಪಡಿಸಿದ ದಿನ ತಪ್ಪದೆ ಬರುತ್ತಿದ್ದರು. ಇನ್ನೊಂದು ವಿಶೇಷ ಸಂಗತಿಯೆಂದರೆ ಅವರು ಮೇಲುಕೋಟೆಗೆ ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯರಿಗೆ ಪಾಠ ಮಾಡಲು ಸುಮಾರು ಎರಡು ವರ್ಷ ಬಂದಿರಬಹುದು. ಆ ಅವಧಿಯಲ್ಲಿ ತಮ್ಮ ಯಾವುದೇ ಒಂದು ದಿನದ ಪ್ರವಾಸದ ಖರ್ಚನ್ನು ಪಡೆಯಲಿಲ್ಲ. ನಾನು ಅವರಿಗೆ ಕೊಡಹೋದರೂ ಅವರು ಅದನ್ನು ಸ್ವೀಕರಿಸುತ್ತಿರಲಿಲ್ಲ. ಪ್ರಾಣೇಶ್‌ರಾವ್ ಸ್ವಾತಂತ್ರ್ಯ ಹೋರಾಟದ ಯೋಧರೂ ಆಗಿದ್ದರು. ಅವರಿಗೆ ಉಳಿದೆಲ್ಲ ಯೋಧರಿಗೆ ದೊರೆಯುವಂಥ ಸರ್ಕಾರದ ಮಾಸಾಶನ ದೊರೆಯುವುದು ಕಷ್ಟವೇನಿರಲಿಲ್ಲ. ಆದರೆ ಪ್ರಾಣೇಶರಾವ್ ಅದನ್ನು ನಿರಾಕರಿಸಿದ್ದರು. ಅಂಥ ನಿಸ್ಪೃಹತೆಯ ವ್ಯಕ್ತಿ ಟ್ರಸ್ಟಿನಿಂದ ಪ್ರವಾಸಭತ್ಯೆ ಪಡೆದಾರೆಯೆ?

(ಮುಂದುವರೆಯುವುದು...)

* * *

ಪುಸ್ತಕ ವಿಚಾರ

ಸ್ವದೇಶಿ ವಸ್ತುಗಳ ಬಗ್ಗೆ ಭಾರತೀಯರು ಉದಾಸೀನರಾಗಿರುವಂತೆ, ಭಾರತೀಯ ಅರ್ಥಶಾಸ್ತ್ರಜ್ಞರ ಬಗ್ಗೆಯೂ ಉದಸೀನರಾಗಿದ್ದಾರೆ. ಇದಕ್ಕೆ ಜ್ವಲಂತ ಉದಾಹರಣೆ ಜೆ.ಸಿ.ಕುಮಾರಪ್ಪನವರು. ಅಮೇರಿಕಾದಲ್ಲಿ ವಿದ್ಯಾಭ್ಯಾಸಮಾಡಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಭಾರತದ ವಿಶಿಷ್ಟ ಅರ್ಥನೀತಿಯನ್ನು ಅಧ್ಯಯನಮಾಡಿ ಭಾರತಕ್ಕೆ ತನ್ನದೇ ಆದ ಆರ್ಥಿಕನೀತಿ ಇರಬೇಕೆಂಬುದನ್ನು ಬಲವಾಗಿ ಪ್ರತಿಪಾದಿಸಿದ್ದ ಜೆ.ಸಿ.ಕುಮಾರಪ್ಪನವರ ಬಗ್ಗೆ ಅವರನ್ನು ಬಹು ನಿಕಟವಾಗಿ ತಿಳಿದಿರುವ ಟಿ.ಕೃಷ್ಣಮೂರ್ತಿಯವರು "ಜೆ.ಸಿ.ಕುಮಾರಪ್ಪ-ಗಾಂಧೀ ಅರ್ಥಶಾಸ್ತ್ರಜ್ಞ" ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅವರ ಮೂಲ ಇಂಗ್ಲಿಷ್ ಪುಸ್ತಕವನ್ನು ನೀಲತ್ತಹಳ್ಳಿ ಕಸ್ತೂರಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ.

೬೪ ಪುಟಗಳ ಈ ಪುಸ್ತಕದ ಬೆಲೆ ೨೦ ರೂಪಾಯಿ.

ಪ್ರಕಾಶಕರು-ಜೆ.ಸಿ.ಕುಮಾರಪ್ಪ ಮೆಮೋರಿಯಲ್ ಪಬ್ಲಿಕ್ ಟ್ರಸ್ಟ್.
೬೨, ೩೪ನೇ ಅಡ್ಡರಸ್ತೆ,
೪ನೇ 'ಟಿ' ಬ್ಲಾಕ್,
ಜಯನಗರ, ಬೆಂಗಳೂರು-೪೧.

ಸಂತಾಪ

ದೇಶದ ಹಿಂದುಳಿದಿರುವ ಬಹುಜನರ ಧ್ವನಿಯಾಗಿ ದೇಶದ ರಾಜಕಾರಣದಲ್ಲಿ ಒಂದು ರಾಜಕೀಯ ಶಕ್ತಿಯೂ ಆಗಿದ್ದ ಕಾನ್ಷೀರಾಂ ರವರು ೮-೧೦-೨೦೦೬ ರಂದು ತೀರಿಕೊಂಡರು. ಅವರ ಆತ್ಮಕ್ಕೆ ಜನಪದ ವಿಚಾರವು ಶಾಂತಿಯನ್ನು ಕೋರುತ್ತದೆ.

* * *

ಗಾಂಧೀ ಸ್ಮಾರಕ ನಿಧಿ ಮತ್ತು ಗಾಂಧೀ ಶಾಂತಿ ಪ್ರತಿಷ್ಠಾನ ಇತ್ಯಾದಿ ರಾಷ್ಟ್ರಮಟ್ಟದ ಸಂಸ್ಥೆಗಳೊಂದಿಗೆ ಸಂಪರ್ಕವಿರಿಸಿಕೊಂಡು ಗಾಂಧೀ ವಿಚಾರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಕೆ.ಎಸ್.ಆಚಾರ್ಲುರವರ ಪುತ್ರ ರಾಧಾಕೃಷ್ಣನ್ ಇತ್ತೀಚೆಗೆ ತೀರಿಕೊಂಡರು. ಅವರ ಆತ್ಮಕ್ಕೆ ಜನಪದ ವಿಚಾರವು ಶಾಂತಿಯನ್ನು ಕೋರುತ್ತದೆ.

* * *

Beautiful tree, Science and Technology in 18th century in India, Understanding Gandhi. ಮುಂತಾದ ಪ್ರಬುದ್ಧ ಪುಸ್ತಕಗಳನ್ನು ಬರೆದ ದೇಶದ ಹಿರಿಯ ಚಿಂತಕರಲ್ಲಿ ಒಬ್ಬರಾಗಿದ್ದ ಧರ್ಮಪಾಲ್‌ರವರು ತಮ್ಮ ೮೬ನೇ ವಯಸ್ಸಿನಲ್ಲಿ ೨೪-೧೦-೨೦೦೬ರಂದು ಸೇವಾಗ್ರಾಮದಲ್ಲಿ ತೀರಿಕೊಂಡರು. ಮೃತರ ಆತ್ಮಕ್ಕೆ ಜನಪದ ವಿಚಾರವು ಶಾಂತಿಯನ್ನು ಕೋರುತ್ತದೆ.

* * *

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com